ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 9 ಸಂಚಿಕೆ 45 ನವಂಬರ್ 8, 1987 ಬೆಲೆ 1 ರೂ.

ಒಳಗಿನ ಪುಟಗಳಲ್ಲಿ

ಕರ್ನಾಟಕದ ಮೂಲೆ ಮೂಲೆಗಳಿಂದ ಬೆಂಗಳೂರಿನತ್ತ....

ಭಾರತಾದ್ಯಂತ ಕೋಟಿ ಕೋಟಿ ಹೃದಯಗಳ ಮೂಕವೇದನೆಯೇ ಹೊರ ಹೊಮ್ಮಿ ಡಿ. 9 ರ "ದೆಹಲಿ ಚಲೋ"ದಲ್ಲಿ ಮೊಳಗಲಿದೆ. ದೇಶದ 6 ಕಡೆಗಳಿಂದ ಹೊರಡುವ ಮಹಾ ಪ್ರವಾಹಕ್ಕೆ ಕರ್ನಾಟಕದಿಂದ 4 ಉಪ ನದಿಗಳೂ ಸೇರಬೇಕೆಂದು ಕಾರ್ಮಿಕರ, ರೈತರ, ವಿದ್ಯಾರ್ಥಿ ಯುವಜನರ ಮಹಿಳೆಯರ ಸಂಘಟನೆಗಳು ತೀರ್ಮಾನಿಸಿವೆ. ಗುಲ್ಬರ್ಗಾ, ಬಿಜಾಪುರ, ಮಂಗಳೂರು, ಮೈಸೂರುಗಳಿಂದ ಬಂದು ನ. 20 ಬೆಂಗಳೂರಿನಲ್ಲಿ ಒಗ್ಗೂಡಿ ಅಖಿಲ ಭಾರತ ಜಾಥಾವನ್ನು ಸ್ವಾಗತಿಸಲಿವೆ.

ದೇಶದ ಉತ್ತರದ ತುದಿ ಕಾಶ್ಮೀರದಿಂದ ಒಂದು ಜಾತಾ ದಕ್ಷಿಣದ ತುದಿ ಕನ್ಯಾ ಕುಮಾರಿಯಿಂದ ಮತ್ತೊಂದು ಪಶ್ಚಿಮ ದಿಕ್ಕಿನಲ್ಲಿ ಅಮೃತ ಸರದಿಂದ ಬಾಂಬೆಯಿಂದ, ತಿರುವನಂತಪುರದಿಂದ, ಪೂರ್ವದಲ್ಲಿ ಕಲ್ಕತ್ತಾದಿಂದ ಜಾತಾಗಳು ಆರಂಭವಾಗಿ ಒಂದು ತಿಂಗಳ ಕಾಲ ದೇಶದೆಲ್ಲೆಡೆ ಸಂಚರಿಸಿ ಸಾವಿರಾರು ಹಳ್ಳಿಗಳು ನೂರಾರು ನಗರ, ಪಟ್ಟಣಗಳನ್ನು ಹಾದು, ಪ್ರತಿಮನೆ ಗುಡಿಸಿಲಿನಲ್ಲಿಯೂ ಪ್ರಜ್ಞೆಯ ಕಿಡಿ ಹೊತ್ತಿಸಿ ಅಗಾಧ ಜನ ಸಾಗರವಾಗಿ ಡಿಸೆಂಬರ್ 9ರಂದು ದೆಹಲಿಯನ್ನು ಸೇರಲಿದ್ದಾವೆ. "ದೇಶದ ಸಮಗ್ರತೆ ಐಕ್ಯತೆಯನ್ನು ರಕ್ಷಿಸುತ್ತೇವೆಂಬ ಧೃಡ ವಚನದ ಮೇಲೆ ಆರಿಸಿ ಬಂದು ಅಸಮಗ್ರತೆ ಅನೈಕ್ಯತೆಯ ಮೂರ್ತಿರೂಪಾದ ರಾಜೀವ್‌ಗಾಂಧಿಯವರೇ ರಾಜೀನಾಮೆ ಕೊಡಿ" "ದೇಶದ ರಕ್ಷಣೆಯ ವಿಷಯದಲ್ಲಿಯೇ ಭ್ರಷ್ಟಾಚಾರಕ್ಕೆ ಕೈ ಹಾಕಿದ ಕೇಂದ್ರ ಸರ್ಕಾರ ರಾಜೀನಾಮೆ ಕೊಡಲಿ" ಎಂಬಘೋಷಣೆಗಳುಕೋಟಿ ಕಂಠಗಳಿಂದ ಮೇಲೆಳಲಿದ್ದಾವೆ.

24ಸಾಮೂಹಿಕ ಸಂಘಟನೆಗಳ ನಾಯಕರು ದೆಹಲಿಯಲ್ಲಿ ಕೈಗೊಂಡ ತೀರ್ಮಾನದ ಈ ವಿವರಗಳನ್ನು ನೀವು "ಐಕ್ಯರಂಗ" ದಲ್ಲಿ ಈಗಾಗಲೇ ಓದಿದ್ದೀರಿ. ದೇಶವನ್ನು ದಿವಾಳಿಯೆಬ್ಬಿಸುವ, ಸಾಮ್ರಾಜ್ಯಶಾಹಿಗಳಿಗೆ ಒತ್ತೆಯಿಡುವ ನೀತಿ ಜನರನ್ನುಹಸಿವಿನಸಂಕಟಕ್ಕೆಗುರಿ ಮಾಡಿದೆ, ರೊಚ್ಚಿಗೆಬ್ಬಿಸಿದೆ. ಈ ಎಲ್ಲಾ ಅಸಮಧಾನ, ಅಸಂತೃಪ್ತಿಗಳು ಸಂಕಟ, ರೋಷಗಳು ಒಗ್ಗೂಡಿಸಾಗರವಾಗಿ ದೇಶದೆಲ್ಲಾ ಜನರ ಬದುಕಿನ ಪ್ರಶ್ನೆಯನ್ನು ನಿರ್ಧರಿಸುವನಿರ್ಣಾಯಕ ಸಂಸ್ಥೆ ಸಂಸತ್ತಿನ ಮುಂದೆ ಸವಾಲಾಗಿ ನಿಲ್ಲಲಿದ್ದಾರೆ.

ತಿರುವನಂತಪುರದಿಂದ ನ.10ರಂದು ಹೊರಡಲಿರುವ ಜಾಥಾ ದಿನಾಂಕ 20 ರಂದು ತಮಿಳುನಾಡಿನ ಹೊಸೂರಿನಿಂದ ಕರ್ನಾಟಕವನ್ನು ಪ್ರವೇಶಿಸಲಿದೆ. ಬೆಂಗಳೂರಿನಲ್ಲಿ ಮೆರವಣಿಗೆ, ಬಹಿರಂಗ ಸಭೆಗಳನ್ನು ಉದ್ದೇಶಿಸಿ ಭಾಷಣ ಮಾಡಿದ ನಂತರ ಮರುದಿನ ಕೋಲಾರಜಿಲ್ಲೆಯ ಹಳ್ಳಿ ಪಟ್ಟಣಗಳಲ್ಲಿ ಪ್ರಚಾರ ಮಾಡುತ್ತಾರೆ. ಅಂದು ಕೋಲಾರಜಿಲ್ಲೆಯಲ್ಲಿಯೇ ತಂಗಿ ಮರುದಿಂದ ಹಿಂದೂಪುರವನ್ನು ಪ್ರವೇಶಿಸಲಿದೆ.

ಕರ್ನಾಟಕದಲ್ಲಿ

ಈ ಅಖಿಲ ಭಾರತ ಜಾಥಾಗಳ ಮಹಾ ಪ್ರವಾಹವನ್ನು ಸೇರಲು ಕರ್ನಾಟಕದಲ್ಲಿ 4 ಉಪ ಪ್ರವಾಹಗಳ ಸರಣಿಯೊಂದನ್ನು ಕರ್ನಾಟಕದ ಜನಸಮುದಾಯದ ಎಲ್ಲಾ ಅಂಗಗಳನ್ನು ಪ್ರತಿನಿಧಿಸುವ 12 ಸಾಮೂಹಿಕ ಸಂಘಟನೆಗಳ ಸಭೆ ತೀರ್ಮಾನಿಸಿದೆ.

ತಾ 3–11–87ರಂದು ಬೆಂಗಳೂರಿನಲ್ಲಿ ಸಿ.ಪಿ.ಐ (ಎಂ), ಸಿ.ಪಿ.ಐ. ಹಾಗೆಯೇ 12 ಸಾಮೂಹಿಕ ಸಂಘಟನೆಗಳ ಪ್ರತಿನಿಧಿಗಳು ಸಭೆ ಸೇರಿ, ತಿರುವನಂತಪುರದಿಂದ ಬರುವ ಜಾಥಾ ಹಾಗೂ ದಿಲ್ಲಿ ಕಾರ್ಯಕ್ರಮದ ಕುರಿತು ಚರ್ಚೆ ಮಾಡಿದರು. 24 ಪ್ರತಿನಿಧಿಗಳನ್ನೊಳಗೊಂಡ ರಾಜ್ಯ ಮಟ್ಟದ ಆಂದೋಲನಾ ಸಮಿತಿಯನ್ನು ರಚಿಸಲಾಯಿತು.

(8ನೇ ಪುಟ ನೋಡಿ)

ಸೂಚನೆ

ನ. 15ರಿಂದ ಕರ್ನಾಟಕದಲ್ಲಿ ಉಪಜಾಥಾಗಳು ಆರಂಭವಾಗಲಿವೆ. "ಐಕ್ಯರಂಗದ" ದ ನ. 15 ರ ಸಂಚಿಕೆಯನ್ನು "ಜಾಥಾ ಸಂಚಿಕೆ" ಯನ್ನಾಗಿ ತರಲು ಉದ್ದೇಶಿಸಲಾಗಿದೆ.

ಅದರಿಂದಾಗಿ ಸೋವಿಯೆತ್ ಕ್ರಾಂತಿಯ ಸಂಚಿಕೆಯನ್ನು ಭಾರತ ಜಾಥಾ ಬೆಂಗಳೂರನ್ನು ತಲುಪುವ ದಿನದಂದು ಬಿಡುಗಡೆ ಮಾಡಲು ಉದ್ದೇಶಿಸಲಾಗಿದೆ.

ಜಾತಿ, ಧರ್ಮಗಳ ಪ್ರಭಾವಕ್ಕೊಳಗಾಗದ ಸರ್ಕಾರ ಬೇಕು

ಜಾತಿ, ಮತ ಮತ್ತು ಧರ್ಮಗಳ ಪ್ರಭಾವಕ್ಕೊಳಗಾಗದ ಸರ್ಕಾರ ಸ್ಥಾಪನೆಯಾಗಬೇಕಾದ ಅಗತ್ಯಇಂದು ಇದೆಯೆಂದು ಬೆಂಗಳೂರು ವಿಶ್ವವಿದ್ಯಾಲಯದ ಪ್ರಸಾರಾಂಗದನಿರ್ದೇಶಕ ಡಾ| ಮುರುಳ ಸಿದ್ದಪ್ಪ ಹೇಳಿದರು.

ಅವರು ಅಕ್ಟೋಬರ್ 4 ರಂದು ಕೋಲಾರದಲ್ಲಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್‌ನ(ಡಿ.ವೈ ಎಫ್.ಐ.) ಮೂರನೇ ರಾಜ್ಯ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ರಾಷ್ಟ್ರವನ್ನು ಜಾತಿವಾದಿ ವಿಚ್ಛಿದ್ರಕಾರಿ ಶಕ್ತಿಗಳು ಒಡೆಯಲು ಯತ್ನಿಸುತ್ತಿವೆ. ಪ್ರಜಾಪ್ರಭುತ್ವದ ಉಳಿವಿಗಾಗಿ ಐಕ್ಯತೆ ಮತ್ತು ಸಮಗ್ರತೆಯನ್ನು ಕಾಪಾಡುವುದು ಎಲ್ಲರಿಗೂ ಮಂತ್ರವಾಗಬೇಕೆಂದು ಅವರು ನುಡಿದರು.

ಭೂಸುಧಾರಣೆ ಅನುಷ್ಠಾನ

ರಾಷ್ಟ್ರದಲ್ಲಿ ಭೂಸುಧಾರಣೆ ತೀವ್ರ ಜಾರಿಯಾದಾಗ ಮಾತ್ರವೇ ಜಡ್ಡುಗಟ್ಟಿ ನಿಂತಿರುವ ಜಾತಿ ಪದ್ಧತಿ ನಾಶವಾಗಿ ದಲಿತರವಿಮೋಚನೆಯ ಸಾಧ್ಯತೆಗಳುಂಟಾಗುವವು ಎಂದರು. ಕಾಲೇಜು-ವಿಶ್ವವಿದ್ಯಾಲಯಗಳು ಈ ಭ್ರಷ್ಟ ವ್ಯವಸ್ಥೆಯನ್ನು ನಿರ್ಮೂಲನಗೊಳಿಸಲಾರವು. ಆ ಕೆಲಸಕ್ಕೆ ಡಿ.ವೈ.ಎಫ್.ಐ ನಂತಹ ಪ್ರಗತಿಪರ ಸಂಘಟನೆಗಗ ಅವಶ್ಯಕತೆಯಿದೆ.

ವಿಜ್ಞಾನ ಆಳುವ ವರ್ಗಗಳ ಕಪಿಮುಷ್ಠಿಯಲ್ಲಿ ಸಿಕ್ಕಿ ನರಳುತ್ತಿದೆ. ಅದು ಜನಪರವಾಗಿ ಎದ್ದು ನಿಲ್ಲಬೇಕಿದೆ. ಇಂದು ನಮ್ಮವಿಜ್ಞಾನ ಪ್ರಸವಪೂರ್ವದಲ್ಲಿಯೇ ಲಿಂಗ ಪತ್ತೆ ಹಚ್ಚುವ ಮಟ್ಟಕ್ಕೆ ಹೋಗಿದೆ. ಭ್ರೂಣ ಹೆಣ್ಣೆಂದು ತಿಳಿಸೊಡನೆ ಗರ್ಭಪಾತ ಮಾಡಿಸಲಾಗುತ್ತಿದೆ. ಮುಂಬಯಿಯಲ್ಲಿ ಇಂತಹ

(8ನೇ ಪುಟ ನೋಡಿ)

ಡಿ. ವೈ. ಎಫ್. ಐ. ಪದಾಧಿಕಾರಿಗಳು

ಕೋಲಾರದಲ್ಲಿ ನಡೆಯುತ್ತಿರುವ ಡಿವೈಎಫ್ಐ ಮೂರನೇ ಸಮ್ಮೇಳನದಲ್ಲಿ ಬೆಂಗಳೂರಿನ ವಕೀಲರಾದ ಕಾ|| ನಾಗಮೋಹನದಾಸ್ ರವರನ್ನು ಅಧ್ಯಕ್ಷರನ್ನಾಗಿ, ಕಾ|| ಶಿವರಾಂ ರವರನ್ನು ಕಾರ್ಯದರ್ಶಿಯನ್ನಾಗಿ ಆರಿಸಲಾಗಿದೆ.

ಉಪಾಧ್ಯಕ್ಷರುಗಳು: ಕಾ|| ಗಂಗಾಧರ ಕುಷ್ಟಗಿ [ರಾಯಚೂರು ಜಿಲ್ಲೆ] ಕಾ|| ನಾಗೇಶ್‌ಕುಮಾರ್ (ದ. ಕ. ಜಿಲ್ಲೆ)

ಜಂಟಿ ಕಾರ್ಯದರ್ಶಿಗಳು : ಕಾ|| ಜಯಕುಮಾರ್ (ಮೈಸೂರು) ಕಾ|| ಸ್ವಾಟ್ಲಿ [ಕೊಡಗು]

ಖಜಾಂಚಿ : ಕಾ|| ಶಿವಶಂಕರ್ (ಬೆಂಗಳೂರು)

ಜಗತ್ತಿಗೆಲ್ಲಾ ಕ್ರಾಂತಿಯ ಕಿಚ್ಚು ಹಬ್ಬಿಸಿದ

ಅಕ್ಟೋಬರ್ ಕ್ರಾಂತಿ

ಶತಮಾನವೆಂದರೇ ಇಂದುಕೂಡ ಅನೇಕ ಮಾನವ ಮನಸ್ಸುಗಳ ಕಲ್ಪನೆಗೆ ನಿಲುಕುವುದಿಲ್ಲ. ಇನ್ನು ಒಂದು ಯುಗವೆಂದರೆ,ಒಂದು ಯುಗ ಕಳೆದು ಮತ್ತೊಂದು ಆರಂಭವಾಗುವುದೆಂದರೆ ಕಲ್ಪನೆಗೆ ಸಿಲುಕುವುದೆ ?

ಒಂದು ಯುಗ ಗತಿಸಿ ಮತ್ತೊಂದು ಹೊಸ ಯುಗ ಆರಂಭವಾದ, ಜಗತ್ತಿನಲ್ಲೆಡೆ ಹೊಸಯುಗದ ಹೆಜ್ಜೆ ಗುರುತುಗಳನ್ನು ಮೂಡಿಸಿದ ಅತ್ಯಪೂರ್ವ ದಿನ; ಮಾನವ ಕೋಟಿ ಹುಟ್ಟಿದಂದಿನಿಂದ ಕಂಡಕನಸುಗಳೆಲ್ಲವನ್ನು ನನಸಾಗಿಸುವೆನೆಂದು ಪಣತೊಟ್ಟ ಹೊಸ ಸಮಾಜ ಅಂಕುರಗೊಂಡ ದಿನ; ಏಳೆಂಟು ನೂರು ವರ್ಷಗಳ ಕಾಲ ಬೆಳೆದು ಧೃಡವಾಗಿ ಜನರನ್ನು ಹಿಂಡಿ ಹಿಪ್ಪೆ ಮಾಡುತ್ತಾ ತನ್ನ ಹೃದಯವೇ ಕೊಳೆತುಹೋದ ಹಳೆಯ ಸಮಾಜದ ಬಸುರೊಡೆದು ಹೊರಬಂದು ಇಡೀ ಜಗತ್ತಿಗೇ ಚೈತನ್ಯ ನೀಡಿದ ಆ ದಿನ ನವೆಂಬರ್—7

ಹುಟ್ಟಿದಂದಿನಿಂದ ಕದನ, ಧಾಳಿ, ಯುದ್ಧಗಳ ಭಯ ಆತಂಕಗಳ ನಡುವೆಯೇ ಬದುಕಿದ್ದ ಜಗತ್ತಿಗೆ ಶಾಂತಿಯ ಮಹಾ ಘೋಷದ ಪಾಠ ಕಲಿಸಿಕೊಟ್ಟ ಕ್ರಾಂತಿ ಅದು. ಯುದ್ಧದ ಕರಾಳ ಅಸುರೀ ಶಕ್ತಿ ಹೆಡೆ ಬಿಚ್ಚಿ ಜಗತ್ತಿನ ಮೂಲೆಮೂಲೆಗಳಲ್ಲಿ ವಿಷವೂಡಿ ಇಡೀ ಜಗತ್ತನ್ನೇ ನಾಶ ಮಾಡಲು ಕಾಯುತ್ತಿರುವ ಇಂದಿನ ದಿನ ರಕ್ಷಣೆಯ ಹೊಣೆ ಹೊತ್ತು ಹಗಲಿರುಳು ಕಾವಲು ಕಾಯುತ್ತಿರುವ ಧೀಮಂತ ಶಕ್ತಿ ಅದು.

(8ನೇ ಪುಟ ನೋಡಿ)

ಪ್ರಶ್ನಿಸಲು ಪ್ರೇರೇಪಿಸಿದ ಜನ ವಿಜ್ಞಾನ ಜಾಥ

ಜಿ. ಎನ್. ಮೋಹನ್

ಪ್ರಶ್ನೆ ಬದುಕಿನ ಜೀವನಾಡಿ ಒಂದು ಪ್ರಶ್ನೆ, ಹಲವು ಪ್ರಶ್ನೆ, ಹಲಹಲವು ಪ್ರಶ್ನೆಗಳು ಪ್ರಶ್ನೆ, ಕೇಳುವುದಕ್ಕೆ ಹೆದರದಿರು ಒಡನಾಡಿ ಎಂದು ಸಾರಲು ಇಡೀ ದೇಶಾದ್ಯಂತ 26 ವಿಜ್ಞಾನ ಸಂಘಟನೆಗಳು ಕೈಗೂಡಿಸಿವೆ. ಭಾರತದಾದ್ಯಂತ ಐದು ತಂಡಗಳಲ್ಲಿ ಸಂಚರಿಸುವ ಜನ ವಿಜ್ಞಾನ ಜಾಥಾದ ಮುಖ್ಯ ಘೋಷಣೆಯೇ 'ಏಕೆ?'

ಬಾನಿನಲ್ಲಿ ಕಾಮನಬಿಲ್ಲು, ನೆತ್ತಿಯ ಮೇಲೆ ಥಳಥಳಿಸುವ ತಾರೆಗಳು ಏಕೆ? ಆಕಾಶ ನೀಲಿ, ಗುಲಾಬಿ, ಕೆಂಪು ಏಕೆ? ಪುಟ್ಟದೊಂದು ಮಿಣುಕುಹುಳು ಹೊಟ್ಟೆಯಲ್ಲೊಂದು ಟಾರ್ಚ್, ಕಾಗೆ ಪಾರಿವಾಳಗಳಂತೆ,ನನ್ನ ಬೆಕ್ಕೇಕೆ ಹಾರಲಾರದು? ಹಸಿವು ಏಕೆ? ಬಡತನವೇಕೆ? ನಿರಕ್ಷರತೆಯೇಕೆ? ಎಂಬುದು ಈ ವಿಜ್ಞಾನ ಜಾಥಾದ ಮುಖ್ಯ ಪ್ರಶ್ನೆ.

ಈ ಪ್ರಶ್ನೆಗಳನ್ನು ಜನಮನದಲ್ಲಿ ಬಿತ್ತಲೆಂದೇ ಅಕ್ಟೋಬರ್ 2 ರಿಂದ ನವೆಂಬರ್ 7ರ ವರೆಗೆ ಮದ್ರಾಸ್, ಶೋಲಾಪುರ್, ಶ್ರೀನಗರ್, ಐಸ್ವಾಲ್ ಮತ್ತು ಮಾಲ್ಡಾದಿಂದ ಹೊರಟು ಇಡೀ ಭಾರತಾದ್ಯಂತ ಸಂಚರಿಸಲಿದೆ. ದಕ್ಷಿಣ ವಿಭಾಗದ ಜಾತಾ ಮದ್ರಾಸ್‌ನಿಂದ ತನ್ನ ಸಂಚಾರ ಆರಂಭಿಸಿ ಕೇರಳ, ಕರ್ನಾಟಕ, ಮಧ್ಯಪ್ರದೇಶ, ಲಕ್ಷದ್ವೀಪ ಮಾರ್ಗವಾಗಿ ಹಾದುಹೋಗುತ್ತದೆ.

ಕರ್ನಾಟಕದಲ್ಲಿ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಮೂರನೆ ರಾಜ್ಯ ಸಮ್ಮೇಳನವನ್ನು ಈ ಜಾತಾ ಬರುವ ವೇಳೆಗೆ ಸಂಘಟಿಸಲಾಗಿದೆ. ಕಾಸರಗೋಡಿನ ನೀಲೇಶ್ವರದಿಂದಬೀಳ್ಕೊಂಡು ಕರ್ನಾಟಕವನ್ನು ಪ್ರವೇಶಿಸಿರುವ ಜಾಥಾ ಈಗಾಗಲೇ ಮಂಗಳೂರು, ಉಡುಪಿ, ಶಿವಮೊಗ್ಗ, ಶಿರಸಿ, ಧಾರವಾಡ, ಹಾವೇರಿ, ಚಿತ್ರದುರ್ಗ, ತುಮಕೂರು ಮಾರ್ಗವಾಗಿ ಆಂಧ್ರ ಪ್ರದೇಶವನ್ನು ಪ್ರವೇಶಿಸಿತು.

ಆರೋಗ್ಯ,ಅಣುಯುದ್ಧ ಭೀಕರತೆ, ವಿಶ್ವದ ವಿಕಾಸವನ್ನು ಈ ಜಾಥಾ ಸುಲಭ ರೀತಿಯಲ್ಲಿ ವಿವರಿಸುತ್ತದೆ.



ವಿಜ್ಞಾನ ಮತ್ತು ತಂತ್ರಜ್ಞಾನದ ಶಕ್ತಿಯನ್ನು ವಿವರಿಸುವುದು ವಿಜ್ಞಾನದ ನೀತಿಗಳನ್ನು ರೂಪಿಸುವಲ್ಲಿ ಜನಸಾಮಾನ್ಯರನ್ನು ಒಳಗುಮಾಡುವುದು, ಜನತೆಯ ಅಗತ್ಯಗಳತ್ತ ಗಮನ ಹರಿಸಲು ವಿಜ್ಞಾನಿಗಳನ್ನು ಪ್ರೇರೇಪಿಸುವುದರ ಜೊತೆಯಲ್ಲಿಯೇ ದೇಶದ ಸಮಗ್ರತೆಯನ್ನು ನಾಶಪಡಿಸಲು ಸಂಚು ಹೂಡಿರುವ ವಿಚ್ಛಿದ್ರಕಾರಿ ಶಕ್ತಿಗಳ ವಿರುದ್ಧ ವಿಜ್ಞಾನವನ್ನು ಅತ್ಯಂತ ಪರಿಣಾಮಕಾರಿಯಾಗಿ ಉಪಯೋಗಿಸುವಂತೆಜನಸಾಮಾನ್ಯರಿಗೆಕರೆನೀಡುತ್ತದೆ.

ಜಾಥಾ ಕೇವಲ ಹಾಗೇ ಬಂದು ಹೀಗೆ ಹೋಗುವ ತಂಡವಾಗುಳಿಯಬಾರದೆಂದೇ ಜಾಥಾ ಬರುವ ಒಂದು ತಿಂಗಳು ಪ್ರತೀ ಸ್ಥಳದಲ್ಲೂ ವಿಜ್ಞಾನ ವಸ್ತುಪ್ರದರ್ಶನ, ಚರ್ಚೆ, ಸ್ಲೈಡ್ ಪ್ರದರ್ಶನ, ಉಪನ್ಯಾಸ ಮಾಲಿಕೆಗಳನ್ನು ಏರ್ಪಡಿಸಲಾಗಿದೆ. ಈ ಚರ್ಚೆಗಳು ಪ್ರತಿಯೊಂದು ಸ್ಥಳದಲ್ಲೂ ವಿಜ್ಞಾನ ಸಂಘಟನೆಗಳಿಗೆ ತಳಪಾಯ ಹಾಕಬೇಕೆಂಬುದೇಇದರ ಉದ್ದೇಶ.

ದಿನಾಂಕ 24, 25, 26 ರಂದು ತುಮಕೂರಿನಲ್ಲಿ ಜನವಿಜ್ಞಾನ ಜಾಥಾ ಕಲಾ ತಂಡ ಪ್ರಶ್ನಿಸಲು ಪ್ರೇರೇಪಿಸುವ "ಒಂದು ಪ್ರಶ್ನೆ" ರಕ್ತದಾನದ ಅಗತ್ಯತೆ ವಿವರಿಸಿ ರಕ್ತದಾನ, ಪರಿಸರನಾಶ ಕುರಿತು ಎಚ್ಚರಿಕೆ, ಶಾಂತಿ, ವಿಕಾಸವಾದ ಕುರಿತು 'ಹೆಬ್ಬೆರಳು'ಮುಂತಾದ ನಾಟಕಗಳನ್ನು ಪ್ರದರ್ಶಿಸಿತು.

ಏಕಲವ್ಯ ತನ್ನ ಹೆಬ್ಬೆರಳನ್ನು ಕತ್ತರಿಸಿ ದ್ರೋಣಾಚಾರ್ಯರಿಗೆ ಕೊಡುವುದರ ಮೂಲಕ ಪ್ರಾರಂಭವಾಗುವ ಈ ನಾಟಕ ದುಡಿಮೆಗೆ ಹೆಬ್ಬೆರಳು ಹೇಗೆ ಮುಖ್ಯ ಎಂಬುದನ್ನು ಹಾಗೂ ವಿಕಾಸವಾದದ ಹಲವು ಹಂತಗಳನ್ನು ಬಯಲಾಟ ತಂತ್ರದಲ್ಲಿ ಪರಿಣಾಮಕಾರಿಯಾಗಿ ವಿವರಿಸಿದರು. ಅಣ್ವಸ್ತ್ರಗಳ ಹೋರಾಟಕ್ಕೆ ತಡೆ ಹಾಕಿ ಶಾಂತಿಯನ್ನು ಉಳಿಸುವಂತೆ ಕರೆ ನೀಡುವ 'ಶಾಂತಿ' ನಾಟಕ ಅತ್ಯಂತ ಕಾವ್ಯಮಯ ಸಂಯೋಜನೆಗಳ ಮೂಲಕ ಜನರ ಮನ ಕಲಕಿತು. ಹಾರುವ ಹಕ್ಕಿ, ತೂಗಾಡುವ ಮರ, ಹರಿಯುವ ನೀರು,ಶುಭ್ರ ಆಕಾಶದ ಕಲ್ಪನೆಗಳನ್ನು ಮೂಡಿಸುವುದರಲ್ಲಿ ನಾಟಕ ಯಶಸ್ವಿಯಾಯಿತು. ಆಯಾ ಭಾಷೆಗಳಲ್ಲೇ ನಾಟಕ ಪ್ರದರ್ಶಿಸುತ್ತಿರುವುದು ಈ ಜಾತಾದ ಹೆಗ್ಗಳಿಕೆ.

ದಕ್ಷಿಣ ವಿಭಾಗದ ಜಾತಾದಲ್ಲಿ 'ಸಮುದಾಯ' ಯಶಸ್ವಿಯಾಗಿ ಗುರುತಿಸಿಕೊಂಡಿದೆ. ಈ ಜಾತಾದಲ್ಲಿ ಸಮುದಾಯ ನಟರಿದ್ದಾರೆ. ನಿರ್ದೇಶಕ ಬಸವಲಿಂಗಯ್ಯ, ರಘುನಂದನ್ ಜಾತಾ ನಾಟಕಗಳನ್ನು ನಿರ್ದೇಶಿಸಿದ್ದಾರೆ ಸಮುದಾಯ ತಂಡ ತನ್ನ 120 ಅಡಿಯ 'ಶಾಂತಿ' ಕುರಿತ ಬೃಹತ್ ಭಿತ್ತಿ ಚಿತ್ರವನ್ನು ದೆಹಲಿ, ಕಲ್ಕತ್ತ ಹಾಗೂ ಭೂಪಾಲ್‌ನಲ್ಲಿ ಪ್ರದರ್ಶಿಸಲಿದೆ.

ಈ ಎಲ್ಲಾ ಜಾತಾಗಳಿಗೂ ಉಕ್ಕಿ ಬಂದ ಪ್ರೋತ್ಸಾಹ ಅಪಾರ. ಮಹಾರಾಷ್ಟ್ರ, ಗುಜರಾತ್, ಕೇರಳಗಳಲ್ಲಿ ಮಿನಿ ಜಾತಾಗಳನ್ನು ಸಂಘಟಿಸಲಾಗಿದೆ. ಭೂಪಾಲ್‌ನಲ್ಲಿ ಐದೂ ಜಾತಾಗಳು ಮೇಳೈಸುವ ದಿನದಂದು ಕೇರಳದಿಂದ ವಿಶೇಷ "ವಿಜ್ಞಾನ ರೈಲು" ಹೊರಡಲಿದೆ. ಈ ರೈಲಿನಲ್ಲಿ ವಿಜ್ಞಾನ ಪ್ರದರ್ಶನ, ಸ್ಲೈಡ್ ಭಿತ್ತಿ ಪತ್ರ ಪ್ರದರ್ಶಿಸಲಾಗುತ್ತದೆ. ರೈಲು ನಿಂತ ಎಲ್ಲಾ ಕಡೆ ಕೇರಳ ಜಾತಾದ ಕಲಾ ತಂಡದವರು ವಿಜ್ಞಾನ ಕುರಿತು ಗೊಂಬೆಯಾಟ ಪ್ರದರ್ಶಿಸುತ್ತಾರೆ.

ಈ ಎಲ್ಲಾ ಐದು ಜಾತಾಗಳೂ ಕೊನೆಗೆ ನವೆಂಬರ್ 7ರಂದು ಭೂಪಾಲ್‌ನಲ್ಲಿ ಮೇಳೈಸುತ್ತವೆ. ಸರ್ ಸಿ ವಿ. ರಾಮನ್ ರವರ ಹುಟ್ಟು ಹಬ್ಬದ ದಿನ ಮೇಳೈಸಲಿರುವ ಜಾತಾ ಭೂಪಾಲ್ ದುರಂತದತ್ತ ಬೆರಳು ತೋರಿಸಿ ವಿಜ್ಞಾನ ಉಂಟು ಮಾಡಬಹುದಾದ ಪ್ರಮಾದಗಳತ್ತಲೂ ದನಿ ಎತ್ತಿದೆ.

ಭಾರತ ಜನ ವಿಜ್ಞಾನ ಜಾಥ ಅಕ್ಟೋಬರ್ 18 ರಿಂದ ಕರ್ನಾಟಕ ರಾಜ್ಯದ ಹಲವು ಜಿಲ್ಲೆಗಳನ್ನು ಸಂಚರಿಸಿ 24ರಂದು ತುಮಕೂರು ಪ್ರವೇಶಿಸಿತು. ಈ ಜಾಥವನ್ನು ತುಮಕೂರಿನ ವಿವಿಧ ಶಾಲಾ-ಕಾಲೇಜುಗಳ ಎಸ್.ಎಫ್.ಐ. ಹಾಗೂ ಡಿ.ವೈ.ಎಫ್.ಐ.ದ 350 ಕ್ಕೂ ಹೆಚ್ಚು ವಿದ್ಯಾರ್ಥಿ-ಯುವ ಜನರು ಹಾರ್ದಿಕ ಸ್ವಾಗತ ಬಯಸಿ ಸಿರಾಗೇಟ್‌ನಿಂದ ಸೈಕಲ್ ರ್‍ಯಾಲಿ ನಡೆಸಿದರು.

ವಿಜ್ಞಾನ ವಾತಾವರಣ

ವಿಜ್ಞಾನ ಜಾಥಕ್ಕೆ ಪೂರ್ವಭಾವಿಯಾಗಿ ದಕ್ಷಿಣ ಕನ್ನಡದಲ್ಲಿ ಅನೇಕ ವೈಜ್ಞಾನಿಕ ಕಾರ್ಯಕ್ರಮಗಳು ನಡೆದು ವಿಶಿಷ್ಟ ವಾತಾವರಣವೇ ಸೃಷ್ಟಿಯಾಗಿತ್ತು.

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಯೋಜನೆಯಂತೆ ಮುಲ್ಕಿಯಲ್ಲಿ ಅಕ್ಟೋಬರ್ 5ರಿಂದ 9ರವರೆಗೆ ಜನಪ್ರಿಯ ವಿಜ್ಞಾನ ಲೇಖಕರ ಪ್ರಾದೇಶಿಕ ಕಾರ್ಯಶಿಬಿರ ನಡೆಯಿತು. ತಜ್ಞರಾದ ಜಿ.ಟಿ. ನಾರಾಯಣರಾವ್, ಜೆ.ಆರ್. ಲಕ್ಷ್ಮಣರಾವ್, ಎಚ್.ಎಸ್. ಮಾಧುರಾವ್, ಶ್ರೀ ಅಡ್ಯನಡ್ಕ, ಕೃಷ್ಣಭಟ್, ಎ. ಆರ್. ಪಾಷಾಮಾರ್ಗದರ್ಶಕರಾಗಿದ್ದರು. ವಿಜ್ಞಾನಕ್ಕೆ ಸಂಬಂಧಪಟ್ಟ ಲೇಖನ ಬರಹಗಾರರಿಗೆ ಶಿಬಿರ ಉಪಯುಕ್ತವಾಗಿತ್ತು.

ಜಾಥಾ ಸ್ವಾಗತ ಸಮಿತಿಯ ಆಶ್ರಯದಲ್ಲಿ ಮೂರು ತಾಲ್ಲೂಕುಗಳಲ್ಲಿ ಶಾಲಾ ಕಾಲೇಜ್ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ ವೈವಿಧ್ಯಮಯ ಸ್ಪರ್ಧೆ, ಕಾರ್ಯಕ್ರಮಗಳು ನಡೆದವು. ಮಂಗಳೂರು ಆಕಾಶವಾಣಿಯು ಸುಮಾರು ಹತ್ತು ದಿನಗಳ ಕಾಲ ವಿಜ್ಞಾನ ರೂಪಕ ಮುಂತಾದವುಗಳನ್ನು ಪ್ರಸಾರಿಸಿ ವ್ಯಾಪಕ ಪ್ರಚಾರ ನೀಡಿತ್ತು.

ಮಂಗಳೂರು ಸಮುದಾಯ "ಗ್ರಹಣ" ಎಂಬ ಬೀದಿ ನಾಟಕ ಮತ್ತು ಮೂಡಬಿದ್ರೆಯ "ಚದುರಂಗ" ತಂಡ ಪರಿಸರ ಕುರಿತ ಬೀದಿ ನಾಟಕವನ್ನು ಸುತ್ತ ಮುತ್ತಲ ಪ್ರದೇಶಗಳಲ್ಲಿ ಪ್ರದರ್ಶಿಸಿ ತಾನು ಕೊಡುಗೆಯನ್ನೂ ನೀಡಿದವು.

ವಿಜ್ಞಾನೋತ್ಸವವು ಉತ್ಸಾಹದ ಬುಗ್ಗೆಯನ್ನು ಚಿಮ್ಮಿಸಿದೆ. ಇದು ಇಷ್ಟಕ್ಕೇ ನಿಲ್ಲಬಾರದು. ಜಾಥಾ ತಂಡದ ದೇವಿ ಅವರು ಹೇಳುವಂತೆ ವಿಜ್ಞಾನ ಸಾಧನೆ ತಿಳಿಸಲು, ವೈಜ್ಞಾನಿಕ ಮನೋಭಾವ ಹರಡುವ ಕೆಲಸ ನಿರಂತರವಾಗಿ ಸಾಗಬೇಕು.

–ವಿಶ್ವಕುಂದಾಪುರ

ಕಾಫಿ ಕ್ಯೂರಿಂಗ್ ಮತ್ತು ಇತರ ಸಂಘದ ಕಾರ್ಯಕಾರಿ ಸಭೆ

ಅ. 20 ರಂದು ಕಾಫಿ ಕ್ಯೂರಿಂಗ್ ಮತ್ತು ಇತರ ಸಂಘದ ಕಾರ್ಯಕಾರಿ ಸಮಿತಿ ಸಭೆ, ಸಂಘದ ಅಧ್ಯಕ್ಷರಾದ ಕಾಂ. ನಂಜುಂಡಪ್ಪನವರ ಅಧ್ಯಕ್ಷತೆಯಲ್ಲಿ ಚಿಕ್ಕಮಗಳೂರು ನಗರದ ಸಿ.ಐ.ಟಿ.ಯು. ಕಛೇರಿಯಲ್ಲಿ ನಡೆಯಿತು. ಸಂಘದ ಉಪಾಧ್ಯಕ್ಷರಾದ ಕಾ. ವಿ. ಸುಕುಮಾರ್‌ರವರು ಮೊದಲಿಗೆ ಸ್ವಾಗತಿಸಿದರು.

ಕಾರ್ಯಕಾರಿ ಸಭೆಯನ್ನುದ್ದೇಶಿಸಿ ಅಧ್ಯಕ್ಷರು ಮಾತನಾಡುತ್ತಾ ಡಿಸೆಂಬರ್ ತಿಂಗಳಿನಲ್ಲಿ ದೆಹಲಿಯ ಪಾರ್ಲಿಮೆಂಟ್ ಭವನದ ಮುಂದೆನಡೆಯಲಿರುವ ಕಾರ್ಮಿಕರ ಬೃಹತ್ ಮತ ಪ್ರದರ್ಶನದಲ್ಲಿ ಸಂಘದ ಪ್ರತಿನಿಧಿಗಳನ್ನು ಕಳುಹಿಸುವುದಕ್ಕೆ ಸದಸ್ಯರೆಲ್ಲರೂ ಸಿದ್ಧತೆ ಮಾಡಬೇಕೆಂದು ತಿಳಿಸಿದರು. ಈ ಮತ ಪ್ರದರ್ಶನವು ರಾಜೀವ್‌ಗಾಂಧಿ ಸರ್ಕಾರದ ಜನವಿರೋಧಿ ಆರ್ಥಿಕ ನೀತಿಯಿಂದ ಬೆಲೆ ಏರಿಕೆ,ಹಣ ದುಬ್ಬರ,ನಿರುದ್ಯೋಗ ಇತ್ಯಾದಿ ಸಮಸ್ಯೆಗಳನ್ನು ವಿರೋಧಿಸುದಕ್ಕಾಗಿ ಎಂಬುದನ್ನು ಸದಸ್ಯರ ಗಮನಕ್ಕೆ ತಂದರು. ಕಾರ್ಮಿಕರೆಲ್ಲರೂ ತಲೆ ಒಂದಕ್ಕೆ ರೂ. 5-00 ರಂತೆ ಸಿ.ಐ.ಟಿ.ಯು. ವಿನ ಬರಪರಿಹಾರ ನಿಧಿಗೆ ಕೊಡುಗೆ ನೀಡಬೇಕೆಂದು ಕಾರ್ಮಿಕರಿಗೆ ಕರೆ ನೀಡಿದರು.

ನಿರುದ್ಯೋಗ ಸಮಸ್ಯೆ, ಅಸಂಘಟಿತರಿಗೆ ಕನಿಷ್ಟ ವೇತನಜಾರಿ, ಅಸ್ಸಾಂ ಕಾರ್ಮಿಕರ ಮೇಲಿನ ಹಲ್ಲೆ ಖಂಡನೆ, ರಾಜಸ್ತಾನದ 'ಸತಿ' ಪದ್ಧತಿಯ ಆಚರಣೆಯನ್ನು ಖಂಡಿಸುವ ನಿರ್ಣಯ ಅಂಗೀಕರಿಸಲಾಯಿತು. ಕೊನೆಯಲ್ಲಿ ಕಾ. ಬಿ.ಎನ್. ರಾಘವೇಂದ್ರ ವಂದನಾರ್ಪಣೆ ಮಾಡಿದರು.

○

ಬೀಡಿ ಕಾರ್ಮಿಕರಿಗೆ ಸಚಿವರಿಂದ ವಸತಿ ನೀಡುವ ಭರವಸೆ

ಬೀಡಿ ಕಾರ್ಮಿಕರಿಗೆ ಉಚಿತವಾಗಿ ಮನೆಗಳನ್ನು ಕಟ್ಟಿಸಿಕೊಡುವ ಸರ್ಕಾರದ ಯೋಜನೆಯ ಅಡಿಯಲ್ಲಿ ಹರಿಹರದ ಬೀಡಿ ಕಾರ್ಮಿಕರಿಗೆ ಉಚಿತ ಮನೆ ನಿವೇಶನಗಳನ್ನು ನೀಡಬೇಕೆಂದು ಒತ್ತಾಯಿಸಿ ಅ. 8ರಿಂದ ಹರಿಹರದ ಬೀಡಿ ಕಾರ್ಮಿಕರು ಸರದಿ ಉಪವಾಸ ಸತ್ಯಾಗ್ರಹವನ್ನು ನಡೆಸಿದರು. ಪುರಸಭೆಯ ವ್ಯಾಪ್ತಿಯಲ್ಲಿ ಬೀಡಿ ಕಾರ್ಮಿಕರು ಕಟ್ಟಿಸಿಕೊಂಡಿರುವ ಮನೆಗಳನ್ನು ಸಕ್ರಮಗೊಳಿಸಿ ಹಕ್ಕು ಪತ್ರಗಳನ್ನು ನೀಡಬೇಕು, ಭಾಗ್ಯ ಮಂದಿರ ಯೋಜನೆಯ ಅಡಿಯಲ್ಲಿ ಮನೆ ಕಟ್ಟಿಕೊಳ್ಳಲು ಬೀಡಿ ಕಾರ್ಮಿಕರು ಪಡೆದಿರುವ ಸಾಲ ಮನ್ನಾ ಮಾಡಬೇಕು. ಮತ್ತು ಹರಿಹರ ಪುರಸಭೆಯು ಇತ್ತೀಚಿಗೆ ಸ್ವಾಧೀನ ಪಡಿಸಿಕೊಂಡಿರುವ 80 ಎಕರೆ ಜಮೀನಿನಲ್ಲಿ ಎಲ್ಲಾ ನಿವೇಶನ ರಹಿತ ಬೀಡಿ ಕಾರ್ಮಿಕರಿಗೆ ನಿವೇಶನಗಳನ್ನು ಕೊಡಬೇಕು ಎಂಬ ಬೇಡಿಕೆಗಳಿಗಾಗಿ ಈ ಸತ್ಯಾಗ್ರಹ ನಡೆಯಿತು

ಉಪವಾಸ ಸತ್ಯಾಗ್ರಹವನ್ನು ಆರಂಭಿಸುವ ಮೊದಲು ಸುಮಾರು ಒಂದು ಸಾವಿರ ಬೀಡಿ ಕಾರ್ಮಿಕ ಸ್ತ್ರೀ-ಪುರುಷರು ಹರಿಹರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ಮೆರವಣಿಗೆಯ ನೇತೃತ್ವ ವಹಿಸಿದ್ದ ಬೀಡಿ ಕಾರ್ಮಿಕ ಸಂಘದ ಪ್ರಧಾನ ಕಾರ್ಯದರ್ಶಿ ಕಾಮ್ರೆಡ್ ನಿತ್ಯಾನಂದ ಸ್ವಾಮಿ ಪುರಸಭಾಧ್ಯಕ್ಷರಿಗೆ 837 ವೈಯುಕ್ತಿಕ ಮನವಿಗಳನ್ನು ಸಲ್ಲಿಸಿ ಅವರಿಗೆ ಉಚಿತ ನಿವೇಶನಗಳನ್ನು ಕೊಡಬೇಕೆಂದು ಒತ್ತಾಯಿಸಿದರು.

ಜಿಲ್ಲಾಧಿಕಾರಿಗಳಿಂದ ದೊರೆತ ಲಿಖಿತ ಭರವಸೆಯ ಮೇರೆಗೆ ಕಳೆದ 20 ದಿನಗಳಿಂದ ನಡೆಯುತ್ತಿದ್ದ ಸರದಿ ಉಪವಾಸ ಸತ್ಯಾಗ್ರಹವನ್ನು ತಾತ್ಕಾಲಿಕವಾಗಿ ಹಿಂತೆಗೆದುಕೊಳ್ಳಲಾಗಿದೆ. ಈ ಮಧ್ಯದಲ್ಲಿ ವಸತಿ ರಾಜ್ಯ ಸಚಿವರು ಹರಿಹರ ಪುರಸಭೆಗೆ ಪತ್ರವೊಂದನ್ನು ಬರೆದು ಹರಿಹರದ ಬೀಡಿ ಕಾರ್ಮಿಕರಿಗೆ ನಿವೇಶನ ಒದಗಿಸಬೇಕೆಂದೂ ನಿವೇಶನಗಳನ್ನು ನೀಡಿದ ನಂತರ ವಸತಿ ನಿರ್ಮಾಣಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದೆಂದು ನಿರ್ದೇಶಿಸಿರುವುದು ತಿಳಿದುಬಂದಿದೆ.

○

ಯು. ಬಿ. ಕಾರ್ಮಿಕರ ಹೋರಾಟಕ್ಕೆ ಜಯ

ಬೆಂಗಳೂರಿನ ಯುನೈಟೆಡ್‌ಬ್ರೈವರೀಸ್ ಎಂಪ್ಲಾಯಿಸ್ ಯೂನಿಯನ್ ಸಿ.ಐ.ಟಿ.ಯು. ನಾಯಕತ್ವದಲ್ಲಿ ತನ್ನ ಹಲವಾರು ಬೇಡಿಕೆಗಳಿಗಾಗಿ ನಡೆಸಿದ ದೀರ್ಘಕಾಲದ ಮುಷ್ಕರ ಇತ್ತೀಚಿಗೆ ಆಡಳಿತ ವರ್ಗ ಹಾಗೂ ಕಾರ್ಮಿಕ ಸಂಘದ ನಡುವೆ ನಡೆದ ಮಾತುಕತೆಯೊಂದಿಗೆ ಮುಕ್ತಾಯಗೊಂಡಿದೆ. ನಾಲ್ಕು ಪ್ರಮುಖಬೇಡಿಕೆಗಳ ಕುರಿತು ಒಪ್ಪಂದಕ್ಕೆ ಬರಲಾಗಿದೆ. ವಜಾ ಮಾಡಲ್ಪಟ್ಟ ಎಲ್ಲಾ 12 ಮಂದಿ ಕಾರ್ಮಿಕರನ್ನು 50% ವೇತನದೊಂದಿಗೆ ಪುನರ್ನೇಮಕ. ಎಲ್ಲಾ ಅಮಾನತುಗಳನ್ನು ರದ್ದುಪಡಿಸಿ 75% ವೇತನ ಪಾವತಿ ಮಾಡುವುದು. ಏಪ್ರಿಲ್ 1, 1985ರಿಂದ ಅನ್ವಯಿಸುವಂತೆ ವೇತನ ಸೌಲಭ್ಯದಲ್ಲಿ 225ರೂನಿಂದ450ರೂಗೆ ಸೇವೆ ಸಲ್ಲಿಸಿದ ಆಧಾರದಲ್ಲಿ ವೇತನದ ಹೆಚ್ಚಳವನ್ನು ಒಳಗೊಂಡಿರುತ್ತದೆ. 257 ದಿನಗಳ ಲಾಕೌಟ್ ಮುಷ್ಕರದ ಅವಧಿಯ 50% ವೇತನ ನೀಡುವ ಬಗ್ಗೆ ಒಪ್ಪಂದವಾಗಿದೆ.

ನಿರಂತರವಾಗಿ ಸೆಣಸಿಗಳಿಸಿದ ಈ ಜಯಕ್ಕಾಗಿ ತನ್ನಗೆ ಎಲ್ಲಾ ರೀತಿಯ ಸಹಾಯ ಸಹಕಾರ ಬೆಂಬಲ ನೀಡಿದ ಅಖಿಲ ಭಾರತ ಯು ಬಿ.ಗ್ರೂಪ್ ಕಾರ್ಮಿಕ ಒಕ್ಕೂಟ, ಸೌಹಾರ್ದ ಟ್ರೆಡ್ ಯೂನಿಯನ್‌ಗಳು, ಸಿ.ಐ.ಟಿ.ಯು ಹಾಗೂ ಇತರಸಂಘಟನೆಗಳಿಗೆ ಯುನೈಟೆಡ್ ಬ್ರೈವರೀಸ್ ಸಂಘ ತನ್ನ ಕೃತಜ್ಞತೆ ಸಲ್ಲಿಸಿದೆ.

○

ಹರ್ಬರ್ಟ್ ಇಂಡಿಯಾ ಕಾರ್ಮಿಕರ ಮೇಲೆ ಪೋಲೀಸ್ ದಬ್ಬಾಳಿಕೆ

ಬೆಂಗಳೂರು ನಗರದಲ್ಲಿರುವ ಆಲ್‌ಫ್ರೆಡ್ ಹರ್ಬರ್ಟ್‌ಇಂಡಿಯಾ ಕಾರ್ಖಾನೆಯ ಸಿ.ಐ.ಟಿ.ಯು. ಕಾರ್ಮಿಕರು ಅಕ್ಟೋಬರ್ 12ರಿಂದ ಬೋನಸ್ ಬೇಡಿಕೆ ಮುಂದಿಟ್ಟು ಮುಷ್ಕರ ನಡೆಸುತ್ತಿದ್ದಾರೆ. ಬೆಂಗಳೂರಿನ ಸಹಾಯಕ ಕಾರ್ಮಿಕ ಕಮಿಷನರ್‌ರವರು ನಾಲ್ಕು ಬಾರಿ ಸಭೆ ಕರೆದರು ಆಡಳಿತವರ್ಗ ಹಾಜರಾಗದೇ ಕಾರ್ಮಿಕರಬೇಡಿಕೆ ಬಗ್ಗೆ ತಿರಸ್ಕಾರ ತೋರಿದ ಕಾರಣ ಮುಷ್ಕರ ಪ್ರಾರಂಭಿಸಲಾಯಿತು. ಕಾರ್ಖಾನೆಯ ಗೇಟ್ ಮುಂದೆ ಹಾಗೂ ಆಫೀಸಿನ ಮುಂದೆ ಪ್ರದರ್ಶನ ಘೋಷಣೆ ಕೂಗುವ ಕಾರ್ಯಕ್ರಮ ನಡೆಸಲಾಯಿತು. ಅಕ್ಟೋಬರ್ 28ರಂದು ಲ್ಯಾವೆಲ್ಲಿ ರಸ್ತೆಕಛೇರಿ ಮುಂದೆ ಶಿಸ್ತಿನಿಂದ ಶಾಂತಿಯುತ ಪ್ರದರ್ಶನ ನಡೆಸುತ್ತಿದ್ದ 105 ಮಂದಿ ಕಾರ್ಮಿಕರನ್ನು ವಿನಾಕಾರಣ ಬಂಧಿಸಿ ಕಬ್ಬನ್ ಪಾರ್ಕ್ ಪೋಲೀಸ್ ಠಾಣೆಗೆ ಕರೆದೊಯ್ಯಲಾಯಿತು. ಸಂಘದ ಪದಾಧಿಕಾರಿಗಳಾದ ಕಾಂ.ಸಿ. ಕುಂಜಪ್ಪನ್, ಎಲ್.ಬಿ. ಶೃಂಗೇಶ್ವರ, ರಿಚರ್ಡ್ ಡಿನಿಲ್ಸಾ ಮತ್ತು ಗುರುಮೂರ್ತಿಯವರನ್ನು ಹಿರಿಯ ಪೋಲೀಸ್ ಅಧಿಕಾರಿ ಕೆ.ನಾರಾಯಣ ಡಿ.ಸಿ.ಪಿ. (ಕಾನೂನು ಸುವ್ಯವಸ್ಥೆ) ಯವರು ಅಸಭ್ಯವಾಗಿ ಮಾತನಾಡುತ್ತಾ ನಿಮ್ಮಂತಹನಾಯಕರಿಂದ ದೇಶ ಹಾಳಾಗುತ್ತಿದೆ. ಅನ್ಯ ಭಾಷೆಯವರನ್ನು ಒದ್ದೋಡಿಸಬೇಕುಮುಂತಾಗಿ ಬೈದು ಹಲ್ಲೆ ನಡೆಸಿರುತ್ತಾರೆ. ನಂತರ ಕೇಸು ದಾಖಲು ಮಾಡಿ ಕೋರ್ಟಿನಲ್ಲಿ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಯಿತು. ಕಾ.ಕುಂಜಪ್ಪನ್‌ರವರು ಕೃಷ್ಣ ರಾಜಪುರ ಕಾರ್ಮಿಕ ಸಂಘಗಳ ಸಿ.ಐ.ಟಿ.ಯು. ಸೌಹಾರ್ದತಾ ಸಮಿತಿ ಸಂಚಾಲಕರಾಗಿದ್ದು ಇವರ ಹಾಗೂ ಇತರ ಸಂಗಾತಿಗಳ ಮೇಲೆ ನಡೆದ ಪೋಲೀಸ್ ದಬ್ಬಾಳಿಕೆಯನ್ನು ಸೌಹಾರ್ದತಾ ಸಮಿತಿಯು ತೀವ್ರವಾಗಿ ಖಂಡಿಸಿದೆ. ಸಂಘ ಮುಂದೆ ನಡೆಸುವ ನಿರ್ಣಾಯಕ ಹೋರಾಟಕ್ಕೆ ಎಲ್ಲಾ ಸಿ.ಐ.ಟಿ.ಯು. ಸಂಘಗಳು ತನ್ನ ಸೌಹಾರ್ದತಾ ಬೆಂಬಲ ಸೂಚಿಸಿ ಹೋರಾಟ ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದೆ.

ಅಂಗಡಿಗಳ ಧ್ವಂಸ ಪಕ್ಷದ ಖಂಡನೆ

ಹಾರೆ, ಪಿಕಾಸಿ, ಕೊಡಲಿ, ಬಡಿಗೆ, ಬೆತ್ತಗಳಿಂದ ಸಜ್ಜಿತರಾಗಿ ಬಂದ ಪುರಸಭೆ, ವಿದ್ಯುತ್‌ಚ್ಛಕ್ತಿ, ಕೆ.ಎಸ್. ಆರ್.ಟಿ.ಸಿ. ಇಲಾಖೆಯ ಅಧಿಕಾರಿಗಳು ಸಿಂಧನೂರಿನ ರಸ್ತೆ ಬದಿಯಲ್ಲಿ ಸಣ್ಣ ಪುಟ್ಟ ಅಂಗಡಿಗಳನ್ನು ಹಾಕಿ ಜೀವನ ಸಾಗಿಸುತ್ತಿದ್ದ ವ್ಯಾಪಾರಸ್ಥರ ಮೇಲೆ ದಾಳಿ ನಡೆಸಿಯೇ ಬಿಟ್ಟರು. ಮಕ್ಕಳುಮರಿ,ಮಹಿಳೆಯರ ಆಕ್ರಂದನ ಚೀರಾಟಗಳ ನಡುವೆಯೇ ಜೀವನ ಸಾಗಿಸಲು ನಡೆಸುತ್ತಿದ್ದ ಅಂಗಡಿಯ ಸಾಮಾನುಗಳು ಕ್ಷಣದಲ್ಲೇ ಚಲ್ಲಾಪಿಲ್ಲಿ ಎಲ್ಲವು ಧ್ವಂಸ. ನವಂಬರ್ 2ರಂದು ಸಂಜೆ 7 ಗಂಟೆಯಿಂದ ಬೆಳಗಿನಜಾವ 5ಗಂಟೆಯವರೆವಿಗೆ ನಡೆದ ಘಟನೆ. ಕರ್ನಾಟಕ ರಾಜ್ಯ 31ನೇಯ ರಾಜ್ಯೋತ್ಸವ ಆಚರಿಸುತ್ತಿರುವ ಕಾಲದಲ್ಲಿ ಸಿಂಧನೂರುಜನತೆ ಕಂಡಬೀದಿ ಪಾಲು. ಅಧಿಕಾರಿಗಳು ಯಾವ ಮುನ್ಸೂಚನೆಯನ್ನು ನೀಡದೆ ನಡೆಸಿದ ಇಂತಹ ಅಮಾನುಷ ದಾಳಿಯನ್ನು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಸಿಂಧನೂರು ಘಟಕ ಉಗ್ರವಾಗಿ ಖಂಡಿಸಿದೆ.

ಈ ಜನತೆಯ ನೆರವಿಗೆ ಧಾವಿಸಿರುವ ಪಕ್ಷ ಘಟಕಯಿಂದ ನೊಂದ ಜನತೆಗೆ ಕೂಡಲೇ ಪರಿಹಾರ ಒದಗಿಸಬೇಕು. ಶಾಶ್ವತ ಪರ್ಯಾಯ ವ್ಯವಸ್ಥೆ ನಿರ್ಮಿಸುವವರೆಗೆ ಸ್ಥಳವಕಾಶವನ್ನು ಒದಗಿಸಬೇಕು. ಎಲ್ಲಾ ಕಾನೂನುಗಳನ್ನು ಮೀರಿ ಜನರ ಮೇಲೆ ಹಲ್ಲೆ ಮಾಡಿದಲ್ಲದೆ ಆಸ್ತಿ ಧ್ವಂಸ ಮಾಡಿದ ಇಲಾಖೆ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ಪಕ್ಷ ಒತ್ತಾಯಿಸಿವೆ. ಈ ಘಟನೆಯ ಕುರಿತು ಕೂಡಲೇ ಕ್ರಮ ಜರುಗಿಸಿ ಪರಿಹಾರ ಒದಗಿಸದಿದ್ದಲ್ಲಿ ಜನತೆಯನ್ನು ಸಂಘಟಿಸಿ ಹೋರಾಟ ನಡೆಸಲಾಗುವುದೆಂದು ಎಚ್ಚರಿಸಿದೆ.

ಕೊಡಗು ತೋಟ ಕಾರ್ಮಿಕರ ಸಭೆಗಳು

ಕೊಡಗಿನ ವಿವಿಧ ಕಡೆಗಳಲ್ಲಿ ಸಿ.ಐ.ಟಿ.ಯು. ಆಶ್ರಯದಲ್ಲಿ ಏರ್ಪಡಿಸಿದ್ದ ಬಹಿರಂಗ ಸಭೆಗಳು ಸೆಪ್ಟೆಂಬರ್ 6, ರಂದು ಸಿದ್ದಾಪುರ, 13 ರಂದು ಪೆರಂಬಕೊಲ್ಲಿ 22 ರಂದು ಕುಟ್ಟ,27ರಂದು ಚಾಣಂಗಾಲದಲ್ಲಿ ಕಾ॥ಆರ್.ಫರ್ನಾಂಡಿಸ್ ಹಾಗೂ ಎಸ್.ಷಣ್ಮುಗರವರುಗಳ ಅಧ್ಯಕ್ಷತೆಯಲ್ಲಿ ಜರುಗಿತು.

ಕೊಡಗುಜಿಲ್ಲಾ ಜನರಲ್ ವರ್ಕರ್ಸ್ ಯೂನಿಯನ್ ಕಾರ್ಯದರ್ಶಿ ಡಾ॥ಐ.ಆರ್.ಅಸ್ರಣ್ಣ, ಖಜಾಂಚಿ ಎಂ.ಎ.ಇಬ್ರಾಹಿಂ, ಅಧ್ಯಕ್ಷ ವೀರಸ್ವಾಮಿ, ಉಪಾಧ್ಯಕ್ಷ ರಾಮಶ್ರೀಅಂತೋಣಿದಾಸ್ ಹಾಗೂ ಕಾ॥ಕುಟ್ಟಪ್ಪ, ಬಿ.ಸಿ.ರಾಜುರವರುಗಳು ಕಾರ್ಮಿಕರನ್ನುದ್ದೇಶಿಸಿ ಮಾತನಾಡಿದರು. ಪ್ರತಿ ಕಾರ್ಮಿಕರಿಗೆ ಕನಿಷ್ಠ 600ರೂ ವೇತನ ಪೋಲೀಸ್ ದಬ್ಬಾಳಿಕೆ, ಕಾರ್ಮಿಕರ ವಿವಾದ ಶೀಘ್ರ ಇತ್ಯಾರ್ಥ ಚಂಗೊಲಿ ಪದ್ಧತಿ ರದ್ದು ಸೌಲಭ್ಯದೊರೆಯಬೇಕು ಟೀ ತೋಟಗಳನ್ನು ಖಾಸಗಿಯವರಿಗೆ ವಹಿಸುವುದು ನಿಲ್ಲಬೇಕು, ಕಾರ್ಮಿಕ ಕಾಯ್ದೆ ತಿದ್ದುಪಡಿಯನ್ನು ತಡೆಗಟ್ಟಬೇಕು, ಜೀವನಾವಶ್ಯಕ ವಸ್ತುಗಳನ್ನು ನ್ಯಾಯ ಬೆಲೆ ಅಂಗಡಿಗಳ ಮೂಲಕ ವಿತರಣೆ ಮಾಡಬೇಕು ಮುಂತಾದ ತೋಟ ಕಾರ್ಮಿಕರ ಸಮಸ್ಯೆಗಳನ್ನು ಕುರಿತು ಮಾತನಾಡಿದ ನಾಯಕರು ಈ ಬೇಡಿಕೆಗಳಿಗಾಗಿ ಕಾರ್ಮಿಕರು ಹೋರಾಟ ನಡೆಸಲು ಕರೆ ನೀಡಿದರು.

ಮುಖ್ಯಮಂತ್ರಿಗೆ ಬೇಡಿಕೆಗಳ ಮನವಿ ಪತ್ರ

ಅಕ್ಟೋಬರ್ 18ರಂದು ರಾಜ್ಯದ ಮುಖ್ಯಮಂತ್ರಿ ಶ್ರೀ ರಾಮಕೃಷ್ಣ ಹೆಗಡೆಯವರು ಬೀದರ್‌ಗೆಭೇಟಿನೀಡಿದ ಸಂದರ್ಭದಲ್ಲಿ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ದ ಬೀದರ್ ಘಟಕ ಜಿಲ್ಲೆಯ ಜನರ ಹಲವಾರು ಜೀವಂತ ಸಮಸ್ಯೆಗಳನ್ನು ಬಗೆ ಹರಿಸಲು ಒತ್ತಾಯಿಸಿ ಮನವಿ ಅರ್ಪಿಸಲಾಯಿತು.

ಕಾರಂಜಾ ಯೋಜನೆಯನ್ನು ಕೂಡಲೇ ಪ್ರಾರಂಭ ಮಾಡಬೇಕು. ಕಾರಂಜಾ ಸಹಕಾರ ಸಕ್ಕರೆ ಕಾರ್ಖಾನೆ ಹಾಗೂ ಬಸವ ಕಲ್ಯಾಣ ಸಹಕಾರ ಸಕ್ಕರೆ ಕಾರ್ಖಾನೆ ಸ್ಥಾಪಿಸಬೇಕು. ಬೀದರಲ್ಲಿ ಸಾಕಷ್ಟು ಹಾಲು ಉತ್ಪಾದನೆಯಾಗುತ್ತಿರುವುದರಿಂದ ಡೈರಿ ಫಾರ್ಮ್ ಸ್ಥಾಪಿಸಬೇಕು. ಭೂಹೀನರು ಹಾಗೂ ಹರಿಜನರು ಸಾಗುವಳಿ ಮಾಡುವ ಜಮೀನನ್ನು ಕೂಡಲೇ ಸಕ್ರಮಗೊಳಿಸಬೇಕು. ಎಲ್ಲಾ ದಿನಗೂಲಿ ನೌಕರರನ್ನು ಖಾಯಂ ಗೊಳಿಸಿ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು. ಮುಂತಾದ ಬೇಡಿಕೆಗಳ ಮನವಿ ಸ್ವೀಕರಿಸಿದ ಹೆಗಡೆಯವರು ನಿಯೋಗದೊಂದಿಗೆ ಚರ್ಚಿಸಿ ಬೇಡಿಕೆಗಳ ಕುರಿತು ಕ್ರಮ ಕೈಗೊಳ್ಳುವುದಾಗಿ ಆಶ್ವಾಸನೆ ನೀಡಿದರು. ಕಾ. ಸಂಗ್ರಾಮ್‌ರವರು ಈ ನಿಯೋಗದ ನಾಯಕತ್ವ ವಹಿಸಿದ್ದರು.

●

ರಾಜಕೀಯ ಸಮಾವೇಶಗಳು

ಮೈಸೂರು

ದೇಶದ ಆರ್ಥಿಕತೆ ತೀವ್ರ ಬಿಕ್ಕಟ್ಟಿಗೆ ಒಳಗಾಗಿ ಅಪಾಯದ ಮಟ್ಟ ತಲುಪಿರುವ ರಾಜೀವಗಾಂಧಿ ನೇತೃತ್ವದ ಕಾಂಗ್ರೆಸ್ ಸರ್ಕಾರ ಎಲ್ಲಾ ಕ್ಷೇತ್ರಗಳಲ್ಲೂ ಸಂಪೂರ್ಣ ವಿಫಲಗೊಂಡಿರುವುದರಿಂದ ರಾಜೀನಾಮೆ ನೀಡಿ ಮಧ್ಯಂತರ ಚುನಾವಣೆ ನಡೆಸಲು ವ್ಯಾಪಕ ಪ್ರಚಾರ ಬೆಳೆದು ಬರಬೇಕೆಂದು ಪಕ್ಷದ ರಾಜ್ಯ ಕಾರ್ಯದರ್ಶಿ - ಕಾ.ಪಿ.ರಾಮಚಂದ್ರರಾವ್‌ರವರು ಮೈಸೂರು ಜಿಲ್ಲಾ ರಾಜಕೀಯ ಸಮಾವೇಶದಲ್ಲಿ ಮಾತನಾಡುತ್ತಾ ಕರೆ ನೀಡಿದರು.

ಅಕ್ಟೋಬರ್ 27 ರಂದು ಮೈಸೂರಿನ ಟೌನ್‌ಹಾಲ್‌ನಲ್ಲಿ ಸೇರಿದ್ದ ಸಮಾವೇಶದಲ್ಲಿ ಅವರು ಮಾತನಾಡುತ್ತಿದ್ದರು. ರಾಜೀವಗಾಂಧಿ ಸರ್ಕಾರ ಕೋಮು - ಪಿಚ್ಛಿದ್ರಕಾರಿ ಶಕ್ತಿಗಳೊಂದಿಗೆ ಸಂದರ್ಭ ಸಾಧಕ ರಾಜಕೀಯ ಒಪ್ಪಂದಮಾಡಿ ದೇಶದ ಐಕ್ಯತೆ ಹಾಗೂ ಸಮಗ್ರತೆಗೆ ಅಪಾಯವನ್ನೊಡಿದೆಎಂದು ಆರೋಪಿಸಿದರು.

ಸಾಮ್ರಾಜ್ಯಶಾಹಿಗಳು ನಾನಾವೇಶದಲ್ಲಿ ದೇಶದೊಳಗೆ ಪ್ರವೇಶಿಸಿ ದೇಶದ ಐಕ್ಯತೆಗೆ ಗಂಡಾಂತರ ತರುವಂತಹ ಅಪಾಯವನ್ನು ಕೇಂದ್ರ ಸರ್ಕಾರ ನಿರ್ಮಿಸಿದೆ ಎಂದು ರಾಜ್ಯಸೆಕ್ರಟಾರಿಯೇಟ್ ಸದಸ್ಯ ಕಾ.ಸಿ.ನಂಜುಂಡಪ್ಪನವರು ಟೀಕಿಸಿದರು. ಉನ್ನತ ವಲಯದಲ್ಲಿ ಭ್ರಷ್ಟಾಚಾರ, ಆರ್ಥಿಕ ನೀತಿಗಳಲ್ಲಿ ವಿಫಲವಾಗಿರುವ ರಾಜೀವಗಾಂಧಿ ಸರ್ಕಾರ ರಾಜೀನಾಮೆ ನೀಡಲು ಒತ್ತಾಯಿಸಿ ಜನಾಂಧೋಳನ ನಡೆಯಬೇಕೆಂದು ಕರೆ ನೀಡಿದರು.

ಸ್ವಾತಂತ್ರ ಹೋರಾಟದ ಕಾಲದಲ್ಲಿ ಕಂಡ ಆಶಯಗಳು ಭಗ್ನವಾಗಿದ್ದು ಭೂಮಾಲೀಕ-ಬಂಡವಾಳಶಾಹಿ ಬೆಳೆದಿದೆ.

ಎಲ್ಲಾ ಧಾರ್ಮಿಕ ಮೂಲಭೂತವಾದಿಗಳ ವಿರುದ್ಧ ಹೋರಾಟ ನಡೆಸಬೇಕೆಂದು ರಾಜ್ಯ ಸಮಿತಿ ಸದಸ್ಯ ಕಾ. ಮಹಮ್ಮದ್‌ದಸ್ತಗೀರ್ ಹೇಳಿದರು.

ಮೈಸೂರು ಜಿಲ್ಲಾ ಕಾರ್ಯದರ್ಶಿ ಕಾ.ಎಂ.ಎನ್.ಉಗ್ರಪ್ಪನವರು 7 ಬೇಡಿಕೆಗಳ ಆಧಾರದಲ್ಲಿ ರೂಪಿಸಿದ ಬದಲೀ ಧೋರಣೆ ಬದ್ಧ ಹೋರಾಟದಿಂದ ಎಡ - ಪ್ರಜಾಪ್ರಭುತ್ವವಾದಿ ಹಾಗೂ ಜಾತ್ಯಾತೀತ ಶಕ್ತಿಗಳ ಪರ್ಯಾಯ ರೂಪಿಸುವ ಮಹತ್ವವನ್ನು ವಿವರಿಸಿದರು.

ಬಿಜಾಪುರಜಿಲ್ಲೆ

ವಿಭಜನಾಕಾರಿ ಶಕ್ತಿಗಳಿಗೆ ಅಮೇರಿಕನ್ ಸಾಮ್ರಾಜ್ಯಶಾಹಿ ಬೆಂಬಲಿಸುತ್ತಿದ್ದು ದೇಶದ ಐಕ್ಯತೆ ಸಮಗ್ರತೆ ಗಂಡಾಂತಕಾರಿಯಾಗಿದೆ. ರಾಜೀವ ಗಾಂಧಿ ಸರ್ಕಾರ ಪ್ರತ್ಯೇಕತಾವಾದಿ ಕೋಮುವಾದಿ ಶಕ್ತಿಗಳನ್ನು ದಮನ ಮಾಡುವ ಯಾವೊಂದು ಕ್ರಮವನ್ನು ಕೈಗೊಳುವಲ್ಲಿ ಸಂಪೂರ್ಣವಿಫಲವಾಗಿದೆ ಎಂದು ಕಾ.ವಿಜೆ.ಕೆ.ನಾಯರ್, ಕಾ॥ ಶ್ರೀಯಾನ್‌ರವರು ಅಕ್ಟೋಬರ್ 26 ರಂದು ಬಿಜಾಪುರಜಿಲ್ಲಾ ರಾಜಕೀಯ ಸಮಾವೇಶವನ್ನುದ್ದೇಶಿಸಿ ಮಾತನಾಡುತ್ತಾ ಹೇಳಿದರು. ಕಾ|ಭೀಮಸಿ ಕಲಾದಗಿ ಅಧ್ಯಕ್ಷತೆ ವಹಿಸಿದ್ದರು. ಕಾಂಗ್ರೆಗೆ ಪರ್ಯಾಯವನ್ನು ಒದಗಿಸಲು ದೇಶದ ಎಲ್ಲಾ ಎಡ-ಪ್ರಜಾಸತ್ತಾತ್ಮಕ ಶಕ್ತಿಗಳು ಐಕ್ಯಹೋರಾಟ ನಡೆಸಲುಭಾಷಣಕಾರರು ಕರೆನೀಡಿದರು ಡಿಸಂಬರ್ 9ರ ಮಜ್ದೂರ್ ಕಿಸಾನ್‌ರ- 'ದೆಹಲಿ ಚಲೋ' ಯಶಸ್ವಿಗೊಳಿಸಲು ನಿರ್ಣಯ ಕೈಗೊಳ್ಳಲಾಯಿತು.

ಕಾ॥ಮನ್ನುಸಾಬ ಕಲಾದಗಿ ಸ್ವಾಗತಿಸಿ ಕಾ॥ಅಣ್ಣಾರಾಯ ಇಳಿಗೇರ ವಂದನೆ ಸಲ್ಲಿಸಿದರು.

ಬೆಳಗಾಂ ಜಿಲ್ಲೆ

ಅಕ್ಟೋಬರ್ 27 ರಂದು ಬೆಳಗಾಂ ಜಿಲ್ಲಾ ರಾಜಕೀಯ ಸಮಾವೇಶ ಸವದತ್ತಿಯಲ್ಲಿ ಜರುಗಿತು. ಪಕ್ಷದ ರಾಜ್ಯ ಮುಖಂಡರಾದಕಾ॥ವಿ.ಜೆ.ಕೆ.ನಾಯರ್ ಕೆ.ಆರ್.ಶ್ರೀಯಾನ್‌ರವರು ಮುಖ್ಯ ಅತಿಥಿಗಳಾಗಿ ಮಾತನಾಡಿದರು. ರಾಜೀವಗಾಂಧಿ ರಾಜೀನಾಮೆ ಒತ್ತಾಯಿಸಿ ದೇಶವ್ಯಾಪಿ ಚಳುವಳಿ ಅಂಗವಾಗಿ ದೆಹಲಿಯಲ್ಲಿ ಡಿ.9 ರಂದು ನಡೆಯುವ ಬೃಹತ್ ರ್ಯಾಲಿ ಯಶಸ್ವಿಗೊಳಿಸಲು ಕರೆ ನೀಡಿದರು. ಜಿ.ಬಿ.ತೊರೆಗಲ್ ಸ್ವಾಗತಿಸಿ ಸಮಾವೇಶದಉದ್ದೇಶವನ್ನು ಪ್ರಸ್ತಾಪಿಸಿದರು. ಜಿಲ್ಲೆಯ ವಿವಿಧ ಕಡೆಗಳಿಂದ ಸುಮಾರು 150 ಪ್ರತಿನಿಧಿಗಳು ಸಮಾವೇಶದಲ್ಲಿ ಭಾಗವಹಿಸಿದ್ದರು.

○

ಪೋಲೀಸ್ ಹಲ್ಲೆ ಖಂಡನೆ

ಅಕ್ಟೋಬರ್ 24ರಂದು ಡಿ.ವೈ.ಎಫ್.ಐ. ಮಡಿಕೇರಿ ತಾಲ್ಲೋಕಿನ ಕರಿಕೆ ಗ್ರಾಮದಲ್ಲಿ ಸಭೆ ಮುಗಿಸಿ ಬರುತ್ತಿದ್ದ ಕಾ॥ಕಿಶೋರ್‌ರವರನ್ನು ಪೋಲೀಸ್ ಪೇದೆ ಕುಗಾಲಪ್ಪ ಎಂಬುವವರು ವಿನಾಕಾರಣ ಠಾಣೆಗೆ ಕರೆದ್ಯೊಯ್ದು ಥಳಿಸಲಾಯಿತು. ಡಿ.ವೈ. ಎಫ್.ಐ. ರಾಜ್ಯ ಸಮಿತಿ ಸದಸ್ಯ ಕಾ॥ ಸ್ಟಾನ್‌ಲಿವಾಸ್ ಮತ್ತಿತರೆ ಸಂಗಾತಿಗಳು ಠಾಣೆಗೆ ತೆರಳಿ ಕಾ.ಕಿಶೋರ್ ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿದ ನಂತರ ಬಿಡಲಾಯಿತು.

ಕರಿಕೆ ಗ್ರಾಮದಲ್ಲಿ 30 ಮಂದಿ ಕಾರ್ಯಕರ್ತರ ಸಭೆ ಕಾ॥ ಪಿ.ಟಿ. ಥೋಮಸ್‌ರವರ ಅಧ್ಯಕ್ಷತೆಯಲ್ಲಿ ಸೇರಿತು. ಈ ಸಭೆಯಲ್ಲಿ ನೂತನ ಸಮಿತಿಯನ್ನು ರಚಿಸಲಾಯಿತು.

○

ರಾಜ್ಯದ ಪ್ರತಿ ಜಿಲ್ಲೆಯನ್ನೂ ಎಚ್ಚರಿಸಿದ 19 ರಾಜಕೀಯ ಸಮಾವೇಶಗಳು

ದೇಶದ ರಾಜಕೀಯವನ್ನು ಛಿದ್ರಕಾರಿ, ಪ್ರತಿಗಾಮಿ ದಾರಿಗೆ ಎಳೆದೊಯ್ಯುತ್ತಿರುವ ಕಾಂಗ್ರೆಸ್(ಐ) ಪಕ್ಷ ಹಾಗೂ ಕೋಮುವಾದಿ ಶಕ್ತಿಗಳನ್ನು ಎದುರಿಸಲು ಜನರ ಅಸಂತೋಷ, ಅತೃಪ್ತಿಗೆ ಕಾರಣರಾದವರನ್ನು ಬೆಟ್ಟು ಮಾಡಿ ತೋರಿಸಲು, ರಾಜಕೀಯ ಪ್ರಜ್ಞೆಯನ್ನು ಉನ್ನತ ಮಟ್ಟಕೊಯ್ಯಲು ಅ·25-31ರ ವರೆಗೆ ಪಕ್ಷ ಎಲ್ಲಾ ಜಿಲ್ಲೆಗಳಲ್ಲಿ ರಾಜಕೀಯ ಸಮಾವೇಶಗಳನ್ನು ನಡೆಸುವ ನಿರ್ಧಾರ ಮಾಡಿತು. ಈ ರಾಜಕೀಯ ಸಮಾವೇಶಗಳು ಅತ್ಯುತ್ಸಾಹದಿಂದ ನಡೆದ ಬಗ್ಗೆ ವರದಿಗಳನ್ನು ಓದಿ.

ಗುಲ್ಬರ್ಗಾ

ಗುಲ್ಬರ್ಗಾ ಜಿಲ್ಲಾ ರಾಜಕೀಯ ಸಮಾವೇಶ ಅಕ್ಟೋಬರ್ 28ರಂದು ಗುಲ್ಬರ್ಗಾದ ಟೌನ್‌ಹಾಲ್‌ನಲ್ಲಿ ಯಶಸ್ವಿಯಾಗಿ ಜರುಗಿತು. ರಾಜ್ಯ ಸಮಿತಿ ಸೆಕ್ರೆಟರಿಯೇಟ್ ಸದಸ್ಯರಾದ ಕಾಂ. ಎನ್.ಕೆ. ಉಪಾಧ್ಯಾಯರು ಸಮಾವೇಶವನ್ನು ಉದ್ಘಾಟಿಸಿದರು. ಜಿಲ್ಲೆಯ ವಿವಿಧ ಭಾಗಗಳಿಂದ ಬಂದ 500ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು. ಜಿಲ್ಲಾ ಕಾರ್ಯದರ್ಶಿ ಕಾ. ಕಲ್ಲಪ್ಪ ಕಿರಣಗಿಯವರು ಅಧ್ಯಕ್ಷತೆ ವಹಿಸಿದ್ದರು. ಕಾ.ಮಾರುತಿ ಮಾನ್ಪಡೆಯವರು ಮೊದಲಿಗೆ ಸ್ವಾಗತ ಬಯಸಿದರು. ಕಾಂ.ಎನ್.ಕೆ. ಉಪಾಧ್ಯಾಯರು ಹಾಗೂ ರಾಜ್ಯ ಸೆಕ್ರೆಟರಿಯೇಟ್ ಸದಸ್ಯರಾದ ಕಾಂ. ಸೂರ್ಯನಾರಾಯಣರಾವ್‌ರವರುಗಳು ಮಾತನಾಡಿ ಕಾಂಗ್ರೆಸ್ ಆಡಳಿತದ ಸಮಯಸಾಧಕ ನೀತಿಯ ಫಲವಾಗಿ ಕೋಮುವಾದಿ-ಪ್ರತ್ಯೇಕತಾವಾದಿ ಶಕ್ತಿಗಳು ದೇಶದ ಐಕ್ಯತೆಸಮಗ್ರತೆಗೆ ಗಂಡಾಂತರಕಾರಿಯಾಗಿವೆ ಎಂದು ಹೇಳಿ ಜಾತೀಯ ಮತೀಯ ದಂಗೆಗಳು, ಸತಿ ಪದ್ಧತಿ ವಿರುದ್ಧ ಜನತೆ ಹೋರಾಟಕ್ಕೆ ಸಿದ್ಧರಾಗಬೇಕೆಂದು ಕರೆ ನೀಡಿದರು.

ಬಿ.ಜೆ.ಪಿ, ಲೋಕದಳ, ಜನತಾ ಪಕ್ಷಗಳು ಕಾಂಗ್ರೈಗೆ ಪರ್ಯಾಯವಾಗಲು ಸಾಧ್ಯವಿಲ್ಲ.ಎಡ ಮತ್ತು ಜಾತ್ಯಾತೀತ ಶಕ್ತಿಗಳು ಮಾತ್ರ ಪರ್ಯಾಯ ನೀಡಲು ಸಾಧ್ಯವೆಂದು ಹೇಳಿದರು.

17 ಅಂಶಗಳ ಪರ್ಯಾಯ ಕಾರ್ಯಕ್ರಮವನ್ನು ಗ್ರಾಮಾಂತರ ಜನರಲ್ಲಿ ಪ್ರಚಾರ, ನಡೆಸಿ ದೆಹಲಿ ರ್‍ಯಾಲಿಗೆ ಹೆಚ್ಚು ಜನರನ್ನು ಸಂಘಟಿಸಲು ನಿರ್ಣಯ ಕೈಗೊಳ್ಳಲಾಯಿತು. ಕಾ. ತಮ್ಮಣ್ಣನವರ ವಂದನಾರ್ಪಣೆಯೊಂದಿಗೆ ಸಮಾವೇಶ ಮುಕ್ತಾಯಗೊಂಡಿತು.

ಕೋಲಾರ

ಕೋಲಾರ ಜಿಲ್ಲೆಯ ನಾನಾ ಭಾಗಗಳಿಂದ ಬಂದ ಐನೂರಕ್ಕೂ ಹೆಚ್ಚು ರೈತ ಕಾರ್ಮಿಕರೂ, ವಿದ್ಯಾರ್ಥಿ-ಯುವಜನತೆ ಪಾಲ್ಗೊಂಡ ಕೋಲಾರ ಜಿಲ್ಲಾ ರಾಜಕೀಯ ಸಮಾವೇಶ ಖಾದಿ ಮಹಲ್‌ನಲ್ಲಿ ಯಶಸ್ವಿಯಾಗಿ ಜರುಗಿತು. ಪಕ್ಷದ ಶಾಸಕರಾದ ಕಾಂ. ಆರ್. ವೆಂಕಟರಾಮಯ್ಯ, ಟಿ.ಎಸ್. ಮಣಿ, ಮತ್ತು ಲಕ್ಷ್ಮಯ್ಯನವರ ಅಧ್ಯಕ್ಷ ಮಂಡಳಿ ಸಮಾವೇಶವನ್ನು ನಡೆಸಿತು. ಮೊದಲಿಗೆ ಜಿಲ್ಲಾ ಕಾರ್ಯದರ್ಶಿ ಕಾಂ.ಕೆ.ಎಂ.ವೆಂಕಟೇಶ ಸ್ವಾಗತದೊಂದಿಗೆ ಆರಂಭಗೊಂಡಿತು. ಪಕ್ಷದ ರಾಜ್ಯ ಸೆಕ್ರೆಟರಿಯೇಟ್ ಸದಸ್ಯರಾದ ಕಾಂ.ಎಸ್. ಸೂರ್ಯನಾರಾಯಣರಾವ್, ಎನ್.ಕೆ. ಉಪಾಧ್ಯಾಯ ಹಾಗೂ ರಾಜ್ಯ ಸಮಿತಿ ಸದಸ್ಯ ಕಾಂ.ಮಹಮ್ಮದ್ ದಸ್ತಗಿರ್‌ರವರುಗಳು ಮಾತನಾಡಿ ರಾಜೀವ್‌ಗಾಂಧಿ ಸರ್ಕಾರದ ಆರ್ಥಿಕ ನೀತಿ, ವಿಶ್ವಬ್ಯಾಂಕ್ ನೀತಿಗೆ ಅನುಗುಣವಾಗಿ ದೇಶದ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳನ್ನು ಕಡೆಗಣಿಸಲ್ಪಟ್ಟಿರುವುದರ ಪರಿಣಾಮವಾಗಿ ದೇಶ ನಿರುದ್ಯೋಗ ಸಮಸ್ಯೆ ಎದುರಿಸುವಂತಾಗಿದೆ ಎಂದು ಹೇಳಿದರು. ಪ.ಬಂಗಾಳ, ತ್ರಿಪುರ, ಕೇರಳ ಸರ್ಕಾರಗಳ ನೇತೃತ್ವದಲ್ಲಿ ಕಂಡು ಬಂದಿರುವ ಗಮನಾರ್ಹ ಸಾಧನೆ, ಜಾತೀಯ ಮತೀಯ ಸೌಹಾರ್ದತೆಯನ್ನು ಕಾಪಾಡುವಲ್ಲಿ ಎಡ-ಪ್ರಜಾಸತ್ತಾತ್ಮಕ ಶಕ್ತಿಗಳು ಯಶಸ್ವಿಯಾಗಿರುವುದನ್ನು ವಿಶ್ಲೇಷಿಸಿದರು. ಪಕ್ಷದ 17 ಅಂಶದ ಕಾರ್ಯಕ್ರಮವನ್ನು ಜನರ ಮಧ್ಯೆ ಕೊಂಡೊಯ್ಯು ರಾಜೀವ್‌ಗಾಂಧಿ- ರಾಜೀನಾಮೆ ನೀಡಿ, ಮಧ್ಯಂತರ ಚುನಾವಣೆಯ ನಡೆಸಬೇಕು ಎಂಬ ಕೇಂದ್ರ ಸಮಿತಿ ಕರೆಯ ಘೋಷಣೆಯನ್ನು ಜಾರಿಗೊಳಿಸುವ ನಿರ್ಣಯವನ್ನು ರಾಜ್ಯ ಸಮಿತಿ ಸದಸ್ಯರಾದ ಕಾಂ. ಶ್ರೀರಾಮರೆಡ್ಡಿಯವರು ಮಂಡಿಸಿದರು. ಜಿಲ್ಲಾ ಸಮಿತಿ ಸದಸ್ಯ ಕಾಂ.ಜಯರಾಂರವರು ವಂದನೆ ಸಲ್ಲಿಸಿದರು.

ರಾಯಚೂರು

ಜನತೆ ಎದುರಿಸುತ್ತಿರುವ ವಿಸ್ತಾರಗೊಳ್ಳುತ್ತಿರುವ ನಿರುದ್ಯೋಗ, ಬೆಲೆ ಹೆಚ್ಚಳ, ಭ್ರಷ್ಟಾಚಾರಗಳನ್ನು ಬಗೆಹರಿಸಲಾರದ, ದೇಶದ ಸಮಗ್ರತೆಯನ್ನು ಕಾಪಾಡಲು ಛಿದ್ರಕಾರಿ ಪಂಥವಾದಿ ಶಕ್ತಿಗಳನ್ನು ಸಮರ್ಥವಾಗಿ ಎದುರಿಸಲಾರದ ರಾಜೀವಗಾಂಧಿ ರಾಜೀನಾಮೆ ಕೊಟ್ಟು,' ಚುನಾವಣೆಯ ನಡೆಸುವುದು ಅಗತ್ಯವೆಂದುರಾಯಚೂರಿನಲ್ಲಿಅಕ್ಟೋಬರ್ 27ರಂದು ಸೇರಿದ್ದ ಜಿಲ್ಲಾ ರಾಜಕೀಯ ಸಮಾವೇಶದಲ್ಲಿಸಿ.ಪಿ ಐ.(ಎಂ) ಮುಖಂಡರಾದ ಎನ್.ಕೆ.ಉಪಾಧ್ಯಾಯ, ಎಸ್. ಸೂರ್ಯನಾರಾಯಣರಾವ್ ತಮ್ಮ ಭಾಷಣದಲ್ಲಿ ಹೇಳಿದರು. ಜಿಲ್ಲೆಯ ನಾನಾ ಭಾಗಗಳಿಂದ 800ಕ್ಕೂ ಹೆಚ್ಚು ಪ್ರತಿನಿಧಿಗಳು ಆಗಮಿಸಿದ್ದು ಭಗಿನೀಸಮಾಜದಲ್ಲಿ ಏರ್ಪಡಿಸಿದ್ದ ವಿಶೇಷ ಮಂಟಪದಲ್ಲಿ ಸಮಾವೇಶ ನಡೆಯಿತು. ಜಿಲ್ಲಾ ಮುಖಂಡರಾದ ರಾಘವೇಂದ್ರಕುಷ್ಟಗಿಅಧ್ಯಕ್ಷತೆ ವಹಿಸಿದ್ದರು. ನಗರಸಭಾ ಸದಸ್ಯೆ ಹರಿಣಿಕಕ್ಕೇರಿಯವರು ಸ್ವಾಗತ ಮಾಡಿದರು. ಕಾರ್ಮಿಕ ಮುಖಂಡರಾದ ಪುರುಶೋತ್ತಮ ಕಲಾಲಬಂಡಿಯವರು ಭಾಷಣ ಮಾಡಿ ಬರಗಾಲ, ಕಾರ್ಮಿಕರ ಸಮಸ್ಯೆಗಳಲ್ಲಿಯ ವೈಫಲ್ಯವಿವರಿಸಿದರು. ಸಿ.ಪಿ.ಐ.(ಎಂ) ಮುಖಂಡ ತಾಯಣ್ಣ ಅಭಾರ ಮನ್ನಿಸಿದರು. ಪ್ರತಿನಿಧಿಗಳಿಗೆಲ್ಲ ಊಟದ ವ್ಯವಸ್ಥೆ ಮಾಡಲಾಗಿತ್ತು. ಸಮಾವೇಶದ ನಂತರ ಮೆರವಣಿಗೆ ನಡೆಯಿತು. ಅನಂತರ ಸಮುದಾಯದವರಿಂದ ನಾಟಕ ಪ್ರದರ್ಶನ ಮುಸ್ಲಿಂ ಮತ್ತಿತರ ಮಹಿಳಾ ಪ್ರತಿನಿಧಿಗಳ ಹಾಜರಾತಿ ಒಂದು ವೈಶಿಷ್ಟವಾಗಿತ್ತು.

ಬಳ್ಳಾರಿ

ರಾಜೀವ್ ಗಾಂಧಿಯವರ ಕೇಂದ್ರ ಸರ್ಕಾರ ಕೂಡಲೇ ರಾಜೀನಾಮೆಯನ್ನು ನೀಡಿ ಮಧ್ಯಂತರ ಚುನಾವಣೆಯನ್ನು ನಡೆಸಬೇಕೆಂದು ಒತ್ತಾಯಿಸಿ ಸಿ.ಪಿ.ಐ.(ಎಂ) ಬಳ್ಳಾರಿ ಜಿಲ್ಲಾ ಸಮಾವೇಶವು ಅಕ್ಟೋಬರ್ 26 ರಂದು ಬಳ್ಳಾರಿ ನಗರದಲ್ಲಿ ಅತ್ಯಂತ ಯಶಸ್ವಿಯಾಗಿ ಜರುಗಿತು.

ಈ ಸಮಾವೇಶದ ಅಧ್ಯಕ್ಷತೆಯನ್ನು ಕಾರ್ಯದರ್ಶಿ ಕಾಂ. ಎಸ್. ಪ್ರಸನ್ನ ಕುಮಾರ್ ವಹಿಸಿದ್ದರು. ಜಿಲ್ಲೆಯ ವಿವಿಧ ಕಡೆಗಳಿಂದ ಬಂದ ಸುಮಾರು 300 ರಷ್ಟು ಪ್ರತಿ ನಿಧಿಗಳನ್ನು, ಹಾಗೂ ಪಕ್ಷದ ಮುಖಂಡರುಗಳನ್ನು ಜಿಲ್ಲಾ ಸದಸ್ಯ ಕಾ.ಎಸ್.ವೈ. ಗುರುಶಾಂತ್ ಸ್ವಾಗತಿಸಿದರು.

ಸಮಾವೇಶದ ಉದ್ಘಾಟನೆಯನ್ನು ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ. ಎನ್.ಕೆ. ಉಪಾಧ್ಯಾಯರವರು ನೆರವೇರಿಸಿದರು. ಹೇಗೆ ರಾಜೀವ್ ಗಾಂಧಿಯವರ ಸರ್ಕಾರದ ಯೋಜನೆ- ನೀತಿಗಳು ಜನ ವಿರೋಧಿಯಾಗಿವೆ ಎಂಬುದನ್ನು ವಿವರಿಸಿದರು. ಅಮೇರಿಕನ್ ಸಾಮ್ರಾಜ್ಯಶಾಹಿಯ ಪಿತೂರಿಗಳಿಂದ ದೇಶವನ್ನು ಛಿದ್ರಗೊಳಿಸಲು ಯತ್ನಿಸುತ್ತಿದೆಎಂದು ವಿವರಿಸಿದಕಾಂ. ಎನ್.ಕೆ. ಉಪಾಧ್ಯಾಯರು ಸಾಮ್ರಾಜ್ಯಶಾಹಿ ವಿರೋಧಿ ಭೂಮಾಲೀಕ, ಬಂಡವಾಳಶಾಹಿ ವಿರೋಧಿ ಹೋರಾಟ,ವನ್ನು ಕಟ್ಟಿ ಬೆಳೆಸುವುದು ಇಂದಿನ ಅಗತ್ಯವೆಂದರು. ಎಡರಂಗಮತ್ತು ಎಡ ಪ್ರಜಾಸತ್ತಾತ್ಮಕ ರಂಗಗಳ ಸರ್ಕಾರಗಳ ಸಾಧನೆಗಳನ್ನು ವಿಶ್ಲೇಷಿಸಿ, ರಾಜೀವ್‌ಗಾಂಧಿಯವರ ಸರ್ಕಾರದ ವೈಫಲ್ಯಗಳನ್ನು, ಅವುಗಳ ನೀತಿಯ ವಿರುದ್ಧ ಹೋರಾಡುವ ಬಗ್ಗೆ ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಪಕ್ಷದ ರಾಜ್ಯ ಸಮಿತಿ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ. ಎಸ್. ಸೂರ್ಯನಾರಾಯಣರಾವ್ ಅವರು ರಾಜೀವ್‌ಗಾಂಧಿ ಸರ್ಕಾರದ ವೈಫಲ್ಯಗಳನ್ನು ವಿವರಿಸುತ್ತಲೇ ಪರ್ಯಾಯವಾದ ಧೋರಣೆಗಳ ಆಧಾರದಲ್ಲಿ ವ್ಯಾಪಕವಾದ ಜನಾಂದೋಲನ ಬೆಳೆಸುವುದರ ಅವಶ್ಯಕತೆ ಕುರಿತು ಮಾತನಾಡಿದರು. ಈ ಬಗ್ಗೆ ವಿವಿಧ ಬಲ ಪಂಥೀಯ ರಾಜಕೀಯ ಪಕ್ಷಗಳ ಸಮಯ ಸಾಧಕ ನೀತಿಗಳನ್ನು ವಿಶ್ಲೇಷಿಸಿ, ಎಡ ಪಕ್ಷಗಳ ಸಂಘಟಿತ ಪ್ರಯತ್ನ-ಕಾಳಜಿಗಳನ್ನು ತಿಳಿಸಿದರು.

ಪಕ್ಷದ ಈ ಸಮಾವೇಶದ ನಿರ್ಣಯ ಮತ್ತು ಕರೆಗಳನ್ನು ಜನಸಾಮಾನ್ಯರಿಗೆ ಎಲ್ಲಾ ಹಂತಗಳಲ್ಲಿ ಕೊಂಡೊಯ್ಯುವುದು ಅತ್ಯಂತ ಮುಖ್ಯವಾಗಿದೆ. ಆ ದಿಶೆಯಲ್ಲಿ ಪ್ರಯತ್ನ ತೀವ್ರಗೊಳ್ಳಬೇಕೆಂದರ

ಬದಲಿ ಧೋರಣೆಯ 17 ಬೇಡಿಕೆಗಳನ್ನು ಜಿಲ್ಲಾ ಸದಸ್ಯ ಕಾ.ಪಿ.ಆರ್. ವೆಂಕಟೇಶ್ ಅವರು ವಿವರಿಸಿದರು. ಡಿಸೆಂಬರ್-9ರಂದು ದೆಹಲಿಯಲ್ಲಿ ನಡೆಯುವ 24 ಸಮೂಹಿಕ ಸಂಘಟನೆಗಳ ಒಂದು ಮಿಲಿಯ ಜಾಥಾಕ್ಕೆ ಸಂಪೂರ್ಣ ಬೆಂಬಲ ಸೂಚಿಸಲಾಯಿತಲ್ಲದೇ ಜಿಲ್ಲೆಯಿಂದಲೂ ಸಾವಿರಾರು ಸಂಖ್ಯೆಯಲ್ಲಿ ಇದರಲ್ಲಿ ಪಾಲ್ಗೊಳುವ ನಿರ್ಣಯ ಕೈಗೊಳ್ಳಲಾಯಿತು.

ರಾಜೀವ್ ಗಾಂಧಿ ರಾಜೀನಾಮೆ ನೀಡಿ, ಮಧ್ಯಂತರ ಚುನಾವಣೆ ನಡೆಸಬೇಕೆಂಬ ನಿರ್ಣಯ ಮಂಡಿಸಲಾಯಿತು. ವಂದನಾರ್ಪಣೆ ಕಾಂ. ವೀರಸಂಗಯ್ಯ ಮಾಡಿದರು. ಸಮಾವೇಶದ ನಂತರ ನಗರದಲ್ಲಿ ನೂರಾರು ಜನರ ಮೆರವಣಿಗೆ ನಡೆದು ಸಮಾವೇಶದ ಸ್ಥಳದಲ್ಲೇ ಅಂತ್ಯಗೊಂಡಿತು.

ಧಾರವಾಡ

ರಾಜೀವ್‌ಗಾಂಧಿ ಸರ್ಕಾರದ ವಿದೇಶಾಂಗ ನೀತಿ, ಅದರಿಂದಾಗಿ ಅಲಿಪ್ತ ನೀತಿಗಾಗುತ್ತಿರುವ ಅಪಾಯ, ಅಲಿಪ್ತ ನೀತಿ ಭದ್ರಗೊಳಿಸುವ ಅವಶ್ಯಕತೆ ಛಿದ್ರಕಾರಿ ಶಕ್ತಿಗಳಿಂದ ಭಾರತದ ಐಕ್ಯತೆ ಕಾಪಾಡುವಲ್ಲಿ ಪ್ರತಿಯೊಬ್ಬ ದೇಶಪ್ರೇಮಿಯೂ ತನ್ನ ಜವಾಬ್ದಾರಿಯನ್ನು ನೆರವೇರಿಸಬೇಕೆಂದು ಹುಬ್ಬಳ್ಳಿಯಲ್ಲಿ ಅಕ್ಟೋಬರ್ 25ರಂದು ನಡೆದ ಧಾರವಾಡ ಜಿಲ್ಲಾ ರಾಜಕೀಯ ಸಮಾವೇಶದಲ್ಲಿ ಪಕ್ಷದ ರಾಜ್ಯ ಸೆಕ್ರೆಟರಿಯೇಟ್ ಸದಸ್ಯರಾದ ಕಾಂ. ವಿ.ಜೆ.ಕೆ. ನಾಯರ್, ಹಾಗೂ ಕಾಂ. ಕೆ.ಆರ್. ಶ್ರೀಯಾನ್‌ರವರು ಮಾತನಾಡುತ್ತಾ ಕರೆ ನೀಡಿದರು. ರಾಜ್ಯ ಸಮಿತಿ ಸದಸ್ಯ ಕಾಂ.ವಿ ಎನ್. ಹಳಕಟ್ಟಿಯವರು ಅಧ್ಯಕ್ಷತೆ ವಹಿಸಿದ್ದರು.ನಾಲ್ವತ್ತು ವರ್ಷಗಳ ಕಾಂಗ್ರೆಸ್ ಆಡಳಿತ ದೇಶದ ಜನತೆ ಎದುರಿಸುತ್ತಿರುವ ಯಾವ ಮೂಲಭೂತ ಸಮಸ್ಯೆ ಬಗೆ ಹರಿಸುವಲ್ಲಿ ವಿಫಲವಾಗಿದೆ. ಜನರಿಗೆ ಬಾಧಿಸುತ್ತಿರುವ ಜೀವಂತ ಸಮಸ್ಯೆಗಳ ಪರಿಹಾರಕ್ಕಾಗಿ ದೇಶದ ಎಲ್ಲಾ ಎಡ ಪ್ರಜಾಸತ್ತಾತ್ಮಕ ಶಕ್ತಿಗಳು ಐಕ್ಯ ಹೋರಾಟ ನಡೆಸಲು ಜನರನ್ನು ಅಣಿ ನೆರೆಸಬೇಕೆಂದು ಭಾಷಣಕಾರರು ಕರೆನೀಡಿದರು.

ಚಿತ್ರದುರ್ಗ

ಅಕ್ಟೋಬರ್ 28ರಂದು ಹರಿಹರದಲ್ಲಿ ಚಿತ್ರದುರ್ಗ ಜಿಲ್ಲಾ ರಾಜಕೀಯ ಸಮಾವೇಶ ನಗರ ಸಮಿತಿ ಕಾರ್ಯದರ್ಶಿ ಕಾ.ನಿತ್ಯಾನಂದಸ್ವಾಮಿಯವರ ಅಧ್ಯಕ್ಷತೆಯಲ್ಲಿ ನೆರವೇರಿತು. ಕಾ.ಆರ್.ಬಿ. ಅಂಗಡಿಯವರು ಪ್ರತಿನಿಧಿಗಳನ್ನು ಸ್ವಾಗತಿಸಿದರು. ಜಿಲ್ಲೆಯ ವಿವಿಧ ಭಾಗಗಳಿಂದಬಂದ ಇನ್ನೂರೈವತ್ತಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು. ಸಮಾವೇಶವನ್ನುದ್ದೇಶಿಸಿ ಪಕ್ಷದ ರಾಜ್ಯ ನಾಯಕರುಗಳಾದ ಕಾ.ವಿ.ಜೆ.ಕೆ ನಾಯರ್, ಕಾ.ಕೆ.ಆರ್. ಶ್ರೀಯಾನ್‌ರವರುಗಳು ಮಾತನಾಡಿದರು. ರಾಜೀವಗಾಂಧಿ ಸರ್ಕಾರದ ಆರ್ಥಿಕನೀತಿ, ಕೈಗಾರಿಕಾನೀತಿ, ಭ್ರಷ್ಟಾಚಾರ ಹಗರಣಗಳು ಬರಗಾಲದ ಜನತೆಯನ್ನು ಕಡೆಗಣಿಸಿ ಜನತೆಯ ವಿಶ್ವಾಸ ಕಳೆದು ಕೊಂಡಿರುವುದರಿಂದ ರಾಜೀನಾಮೆ ನೀಡಿ ಮಧ್ಯಂತರಚುನಾವಣೆ ನಡೆಸಬೇಕೆಂದುಒತ್ತಾಯಿಸಿದರು.

ಅಲಿಪ್ತನೀತಿ-ಕೇಂದ್ರ-ರಾಜ್ಯ ಸಂಬಂಧ, ಸಾರ್ವಜನಿಕ ವಿತರಣೆ, ಭೂಸುಧಾರಣೆ, ನಿರುದ್ಯೋಗ ಮುಂತಾದ ಪ್ರಶ್ನೆಗಳ ಬಗ್ಗೆ ಬದಲೀ ಕಾರ್ಯಕ್ರಮ ಹೊಂದಿರುವ ಸರ್ಕಾರವು ಕೇಂದ್ರದಲ್ಲಿ ಬರುವಂತೆ ಜನತೆ ನೋಡಿಕೊಳ್ಳಬೇಕೆಂದು ಕರೆನೀಡಿದರು. ದ್ವಿಸದಸ್ಯತ್ವ ಪ್ರಶ್ನೆ ಬಂದಾಗ ಜನತಾ ಸರಕಾರ ಪತನವಾದದು ಪುನರಾವರ್ತನೆ ಯಾಗದಂತೆ ಬಿ.ಜೆ.ಪಿ.,ಮುಸ್ಲಿಲೀಗ್‌ನಂತಹ ಕೋಮುವಾದಿ ಪಕ್ಷಗಳಿಗೆ ಈ ಆಂದೋಲನದಲ್ಲಿ ಅವಕಾಶವಿಲ್ಲವೆಂದರು. ಬದಲೀ 17 ಅಂಶಗಳನ್ನು ಒತ್ತಾಯಿಸಿ ಡಿ.9 ರಂದು ದೆಹಲಿಯಲ್ಲಿ ನಡೆಯುವ 10 ಲಕ್ಷ ಜನರ ಬೃಹತ್ ಮಜ್ದೂರ್-ಕಿಸಾನ್ ರ್‍ಯಾಲಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಕರೆನೀಡಿದರು.

ಬೀದರ್

ಅಕ್ಟೋಬರ್ 29ರಂದು ಬೀದರ್ ಜಿಲ್ಲೆ ರಾಜಕೀಯ ಸಮಾವೇಶ ಬೀದರ್‌ನಲ್ಲಿ ಜರುಗಿತು. ರಾಜ್ಯ ಸೆಕ್ರೆಟರಿಯೇಟ್ ಸದಸ್ಯರಾದ ಕಾಂ.ಎನ್.ಕೆ. ಉಪಾಧ್ಯಾಯರು ಸಮಾವೇಶವನ್ನುದ್ದೇಶಿಸಿ ಮಾತನಾಡುತ್ತಾ ಸಿ.ಪಿ.ಐ.(ಎಂ) ಪಕ್ಷದ ಕೇಂದ್ರ ಸಮಿತಿ ನಿರ್ಣಯಗಳನ್ನು ವಿವರಿಸಿದರು. ಕಾಂಗ್ರೆ ಪಕ್ಷಕ್ಕೆ ದೇಶದ ಎಡ-ಪ್ರಜಾಸತ್ತಾತ್ಮಕ ಶಕ್ತಿಗಳೇ ಪರ್ಯಾಯವೆಂದು ಹೇಳಿದರು. ಬಿ.ಜೆ.ಪಿ. ಜನತಾ ಪಕ್ಷಗಳು ಪರ್ಯಾಯವಾಗಲು ಸಾಧ್ಯವಿಲ್ಲವೆಂದು 1979ರ ಚರಿತ್ರೆಯೇ ತೋರಿಸಿಕೊಟ್ಟಿದೆ ಎಂದು ಹೇಳಿದರು. ದೇಶದ ಸಮಗ್ರತೆ, ಜಾತೀಯ ಸೌಹಾರ್ದತೆ ರಕ್ಷಿಸಬೇಕಾದರೆ ಸಿ.ಪಿ.ಐ.(ಎಂ) ಪಕ್ಷವನ್ನು ಹಾಗೂ ಜಾತ್ಯಾತೀತ ಶಕ್ತಿಗಳನ್ನು ಬಲಗೊಳಿಸಬೇಕೆಂದು ಕರೆನೀಡಿದರು. ಸುಮಾರು ನೂರು ಪ್ರತಿನಿಧಿಗಳು ಸಮಾವೇಶದಲ್ಲಿ ಭಾಗವಹಿಸಿದ್ದರು. ಕಾಂ. ಸಂಗ್ರಾಮ್ ಅವರು ಮೊದಲಿಗೆ ಸಮಾವೇಶದ ಉದ್ದೇಶವನ್ನು ತಿಳಿಸಿದರು.

ಅಕ್ಟೋಬರ್ 28ರಂದು ಬೀದರ್‌ನಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಕಾಂ. ಎನ್.ಕೆ. ಉಪಾಧ್ಯಾಯರು ಮಾತನಾಡಿ ರಾಜೀವ್‌ಗಾಂಧಿ ಸರ್ಕಾರ ರಾಜೀನಾಮೆ ನೀಡಬೇಕೆಂಬ ಚಳುವಳಿಯಲ್ಲಿ ರಾಜ್ಯದ ಜನತಾ ಪಕ್ಷದ ಸಹಕಾರವೂ ಅಗತ್ಯವಿರುವುದರಿಂದ ಹೆಗಡೆ ಸರ್ಕಾರದಲ್ಲಿನ ಗುಂಪುಗಾರಿಕೆ ಬಿಟ್ಟು ಕೇಂದ್ರದ ವಿರುದ್ಧ ಜನತೆಯನ್ನು ಗೊಳಿಸುವುದಕ್ಕೆ ಸಹ ಕರಿಸಬೇಕೆಂದು ಕರೆನೀಡಿದರು.

(6ನೇ ಪುಟ ನೋಡಿ)

'ಕಾರ್ಮಿಕ ಒಪ್ಪಂದಗಳು ಹಾಗೂ ಕ್ರಾಂತಿಕಾರಿ ಹೋರಾಟಗಳು'

ಉತ್ತರ

ಕಾರ್ಮಿಕ ವರ್ಗವನ್ನು ಸಂಘಟಿಸಿ ಹೋರಾಡುವುದರಲ್ಲಿ ಎರಡು ರೀತಿಯಿದೆ. ತತ್ಕಾಲಿಕವಾಗಿ ಬಂಡವಾಳಶಾಹಿ ಚೌಕಟ್ಟಿನೊಳಗೆ ಸ್ವಂತ ಜೀವನದ ಮಟ್ಟವನ್ನು ಉತ್ತಮಪಡಿಸಿಕೊಳ್ಳುವುದು ಮೊದಲನೆಯದು. ಈವತ್ತಿನ ಪರಿಸ್ಥಿತಿಯಲ್ಲಿ ಜೀವನದ ಮಟ್ಟವನ್ನು ಉತ್ತಮಪಡಿಸಿಕೊಳ್ಳುವುದು ಇದರ ಗುರಿ.

ಇದನ್ನು ಸಾಧಿಸುವುದಕ್ಕೆ ಕಾರ್ಮಿಕರ ಕೈಯ ಆಯುಧವೆಂದರೇ ಕಾರ್ಮಿಕ ಸಂಘಗಳು ಹಾಗೂ ಸಹಕಾರ ಸಂಘಗಳು. ಈ ಸಂಘಟನೆಗಳು ಬಹುಸಂಖ್ಯೆಯ ಕಾರ್ಮಿಕರನ್ನು ಒಟ್ಟುಗೂಡಿಸುವ ಸಾಧನಗಳಾಗಿವೆ. ಈ ಸಂಘಗಳ ಆಯುಧಗಳಾದ ಮುಷ್ಕರ ಮತ್ತಿತರ ಚಳುವಳಿಗಳ ಬೆಂಬಲದಿಂದ ಸಾಮೂಹಿಕ ಚೌಕಾಸಿಯ ಹಕ್ಕು ಉಂಟಾಗುತ್ತದೆ. ಇದಕ್ಕೆ ಸಂಬಂಧಿಸಿದಂತೆ ಕಾರ್ಮಿಕ ವರ್ಗಕ್ಕೆ ಇನ್ನು ಹಿರಿದಾದ ಬೇರೊಂದು ಗುರಿ ಇದೆ. ಬಂಡವಾಳಶಾಹಿ ವ್ಯವಸ್ಥೆಯನ್ನು ಕೊನೆಗಾಣಿಸಿ ಸಮಾಜವಾದವನ್ನು ಸ್ಥಾಪಿಸುವುದು.

ಈ ಗುರಿಯನ್ನು ಯಶಸ್ವಿಗೊಳಿಸುವ ವಿಭಾಗವೇ ಕಾರ್ಮಿಕ ವರ್ಗದ ಮುಂಚೂಣಿ. ತುರ್ತು ಬೇಡಿಕೆಗಳಿಗಾಗಿ ಹೋರಾಟ ಮಾಡುವ ಕಾರ್ಮಿಕರ ಮಧ್ಯದಿಂದ ಎದ್ದು ಬರುವವರು ಸಾಮಾನ್ಯ ಕಾರ್ಮಿಕರಿಗಿಂತ ಹೆಚ್ಚು ರಾಜಕೀಯ ತಿಳುವಳಿಕೆಯುಳ್ಳವರು. ಇವರೇ ಈ ಹೋರಾಟದಲ್ಲಿ ನಾಯಕತ್ವವಹಿಸುವವರು. ಅವರ ಜೊತೆಯಲ್ಲಿ ನಿಲ್ಲುವುದಕ್ಕೆ ಬೇರೆ ವರ್ಗಗಳಿಂದ ಬಂದಿದ್ದರೂ ರಾಜಕೀಯ ತಿಳುವಳಿಕೆ, ವೈಜ್ಞಾನಿಕ ತಿಳುವಳಿಕೆ ಮಟ್ಟದಿಂದಲೂ ಕಾರ್ಮಿಕ ವರ್ಗದ ದತ್ತು ಪುತ್ರರೆಂದು ಹೇಳಲಾಗುವ ಸಮಾಜವಾದಿ ಕ್ರಾಂತಿಕಾರಿಗಳೂ ಇದ್ದಾರೆ. ಈ ಎರಡೂ ವಿಭಾಗಗಳೂ ಸೇರಿಯೇ ಕಾರ್ಮಿಕ ವರ್ಗದ ಕ್ರಾಂತಿಕಾರಿ ರಾಜಕೀಯ ಪಕ್ಷ ರೂಪುಗೊಳ್ಳುವುದು.

ಆದ್ದರಿಂದಲೇ ತಾತ್ಕಾಲಿಕವಾದ ತುರ್ತು ಅವಶ್ಯಕತೆಗಳನ್ನು ಪಡೆಯಲು ಮಾಡುವ ಹೋರಾಟ, ಸಾಮಾಜಿಕ ವ್ಯವಸ್ಥೆಯಲ್ಲಿ ಬದಲಾವಣೆಯನ್ನು ತರಬೇಕೆನ್ನುವ ಹಿರಿದಾದ ಗುರಿಗಾಗಿ ನಡೆಯುವ ಹೋರಾಟ ಎರಡೂ ಸೇರಿಯೇ ವರ್ಗ ಹೋರಾಟವಾಗುವುದು. ಇವೆರಡರಲ್ಲಿಯೂ ವ್ಯತ್ಯಾಸವಿರುವಂತೆಯೇ ಪರಸ್ಪರ ಸಂಬಂಧವೂ ಇದೆ. ಮೊದಲನೆಯದು ಬಂಡವಾಳಶಾಹಿ ಚೌಕಟ್ಟಿನ್ನೊಳಗೇ ನಿಂತು ಕಾರ್ಮಿಕ ವರ್ಗದ ಜೀವನ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಲು ನಡೆಸುವ ಹೋರಾಟ. ಎರಡನೆಯದು ಬಂಡವಾಳಶಾಹಿ ವ್ಯವಸ್ಥೆಯನ್ನು ನಾಶಮಾಡಿ ಶೋಷಣೆಯನ್ನು ಕೊನೆಗೊಳಿಸುವ ಹೋರಾಟ. ಮೊದಲನೆಯದರಲ್ಲಿ ಜಯಗಳಿಸುವುದು ಎರಡನೆಯದಕ್ಕೆ ಮೊದಲಹೆಜ್ಜೆ. ಈ ಮೊದಲ ಹಂತದಹೋರಾಟವಿಲ್ಲದೆ ಎರಡನೆಯ ಹಂತದ ಹೋರಾಟವಿಲ್ಲ. ಆದರೆ ಕಾರ್ಮಿಕ ವರ್ಗದ ಕ್ರಾಂತಿಕಾರಿ ಪಕ್ಷ ಮೊದಲನೆಯ ಹೆಜ್ಜೆಯಲ್ಲಿಯೇ ನಿಲ್ಲಬಾರದು. ಎರಡನೆಯದಕ್ಕೆ ಕಾರ್ಮಿಕವರ್ಗವನ್ನು ಸಜ್ಜುಗೊಳಿಸಲು ಶ್ರಮಿಸಬೇಕು. ಅದಕ್ಕಾಗಿಯೇ ಈಮೊದಲ ಮೆಟ್ಟಿಲನ್ನು ಹತ್ತಬೇಕು. ಏಕೆಂದರೆ, ಬಂಡವಾಳಶಾಹಿ ವ್ಯವಸ್ಥೆಯನ್ನು ಬೇರು ಸಹಿತ ಕಿತ್ತೆಸೆದು ಮಾಲೀಕರು ಹಾಗೂ ಕಾರ್ಮಿಕರಿಲ್ಲದ ಹೊಸ, ಸುಂದರ, ಸಮಾನ ಸಮಾಜವನ್ನು ಕಟ್ಟುವುದರ ಅವಶ್ಯಕತೆಯನ್ನು ಕಾರ್ಮಿಕ ವರ್ಗಕ್ಕೂ ಇತರ ದುಡಿಯುವ ಜನ ವಿಭಾಗಗಳಿಗೂ ಮನಗಾಣಿಕೊಡಲುಕಾರ್ಮಿಕ ವರ್ಗದ ಮುಂಚೂಣಿಯ ವಿಭಾಗ ಶ್ರಮಿಸಬೇಕು. ಇದರ ಮೊದಲ ಹೆಜ್ಜೆ ಕಾರ್ಮಿಕ ಸಂಘಗಳು ಸೇರಿದಂತೆ ಸಾಮೂಹಿಕ ಸಂಘಟನೆಗಳ ನೇತೃತ್ವದಲ್ಲಿ ಪ್ರಕ್ಷೋಭೆ ಮತ್ತು ಹೋರಾಟಗಳನ್ನು ಸಂಘಟಿಸುವುದು.

ಮುಷ್ಕರಗಳೂ ಸೇರಿದಂತೆ ಹಲವಾರು ಹೋರಾಟಗಳ ಫಲವಾಗಿ ಸೇವೆ ವೇತನಗಳಿಗೆ ಸಂಬಂಧಿಸಿ ದೀರ್ಘ ಕಾಲದ ಒಪ್ಪಂದಗಳಾಗುವುದು, ಪ್ರಶ್ನೆಕಾರನು ಆತಂಕ ಪಟ್ಟಂತೆ ಮಾಲೀಕ ಅಥವಾ ಆಡಳಿತವರ್ಗ ಇಂದು ನಡೆಸುತ್ತಿರುವ ಶೋಷಣೆಯನ್ನು ಮುಂದುವರಿಸುವುದಕ್ಕೆ ಸಮ್ಮತಿಕೊಡುವಂತೆ ಆಗಬಹುದು ಎಂಬ ಅಪಾಯವಿದೆ. ಮಾಲೀಕರ ಜೊತೆ ಚೌಕಾಸಿ ಮಾಡುವ ಕಾರ್ಮಿಕ ಸಂಘದ ನಾಯಕತ್ವ ಅಲ್ಲಿಯೇ ನಿಂತರೆ ಪ್ರಶ್ನೆಯಲ್ಲಿರುವ ಆತಂಕ ನಿಜವಾಗುತ್ತದೆ.

ಆದರೆ ಕಾರ್ಮಿಕ ವರ್ಗದ ಮುಂಚೂಣಿ ವಿಭಾಗ ಅಂದರೆ ಕ್ರಾಂತಿಕಾರಿ ಪಕ್ಷ ಮಾಡುವುದು ಅದಲ್ಲ. ಸಾಮಾಜಿಕ ಹಾಗೂ ರಾಜಕೀಯ ಚಳುವಳಿಗೆ ಸಂಬಂಧಿಸಿದ ಮೂಲಭೂತವಾದ ಕ್ರಾಂತಿಯನ್ನು ಸಂಘಟಿಸುವ ಜವಾಬ್ದಾರಿ, ಕಾರ್ಮಿಕ ವರ್ಗಕ್ಕೆ ದುಡಿಯುವ ಜನಸಮೂಹಕ್ಕೆ ಇದೆ ಎಂಬುದನ್ನು ಅವರಿಗೆ ತಿಳಿಸಿಕೊಡುವ ಹೊಣೆಯನ್ನು ಪಕ್ಷ ನಿರ್ವಹಿಸುತ್ತದೆ. ಇದನ್ನು ಮಾಡದೆ ಕಾರ್ಮಿಕ ಚಳುವಳಿಯಲ್ಲಿಯೇ ಮುಳುಗಿ ಹೋಗುವ ಪ್ರವೃತ್ತಿಯನ್ನು ಮಾರ್ಕ್ಸ್ ಎಂಗೆಲ್ಸ್, ಲೆನಿನ್, ಖಂಡ ತುಂಡವಾಗಿ ಖಂಡಿಸಿದ್ದಾರೆ.

ಲೆನಿನ್ನರ ಮೊದಲ ಕೃತಿಗಳಲ್ಲಿ ಒಂದು "ಈಗ ನಮ್ಮ ಕರ್ತವ್ಯವೇನು? ಎಂದಲ್ಲವೇ ? ಆರ್ಥಿಕ ಹೋರಾಟಗಳಲ್ಲಿ ಮಾತ್ರ ಮುಳುಗಿ ಹೋಗಿ ಸೈದ್ಧಾಂತಿಕ ಮತ್ತು ರಾಜಕೀಯ ಹೋರಾಟ ನಡೆಸಬೇಕಾದ ಅನವ್ಯಕತೆ ಗೊತ್ತಿಲ್ಲದ ಬಲ ಸಮಾಜವಾದಿ ಪಕ್ಷಗಳಿಗೆ, ಆರ್ಥಿಕ ಹೋರಾಟದಲ್ಲಿಯೇ ತೊಡಗಿದವರಿಗೆ ಸಮರ್ಥವಾದ ಉತ್ತರ ಈ ಪುಸ್ತಕ ಕಾರ್ಮಿಕ ವರ್ಗದ ಆರ್ಥಿಕ ಬೇಡಿಕೆಗಳಿಸಿಕೊಡುವ ಜೊತೆಯಲ್ಲಿಯೇ ಬಂಡವಾಳಶಾಹಿ ಸೈದ್ಧಾಂತಿಕ ಹಾಗೂ ರಾಜಕೀಯ ರಂಗದಲ್ಲಿ ಸೋಲಿಸಬೇಕಾದ ಜವಾಬ್ದಾರಿಯನ್ನು ಎಂಗೆಲ್ಸ್ ಎತ್ತಿ ತೋರಿಸಿರುವುದನ್ನು ಲೆನಿನ್ ತಮ್ಮ ಪುಸ್ತಕದಲ್ಲಿ ಹೇಳುತ್ತಾರೆ.

ಕಾರ್ಮಿಕ ಸಂಘಗಳೂ ಸೇರಿದಂತೆ ಸಾಮೂಹಿಕ ಸಂಘಟನೆಗಳ ವಿವಿಧ ಜನ ವಿಭಾಗಗಳ ತುರ್ತು ಬೇಡಿಕೆಗಳನ್ನು ಪಡೆಯುವುದಕ್ಕಾಗಿ ಶ್ರಮಿಸುವುದರ ಜೊತೆಯಲ್ಲಿಯೇ ಕಾರ್ಮಿಕ ವರ್ಗ ಸೈದ್ಧಾಂತಿಕವಾಗಿ ಶತ್ರುವರ್ಗ ಜನತೆಗೆದುರಾಗಿ ನಡೆಸುತ್ತಿರುವ ಆಕ್ರಮಣಗಳಿಗೆ ಬಲವಾದ ಎದಿರೇಟು ಕೊಟ್ಟರೆ ಮಾತ್ರ ಕ್ರಾಂತಿಕಾರಿ ರಾಜಕೀಯ ಸಾಧ್ಯವೆಂದು ಆಪುಸ್ತಕದಲ್ಲಿ ಲೆನಿನ್ ಬರೆಯುತ್ತಾರೆ. ಅದನ್ನು ಮಾಡದೆ, ಸೀಮಿತವಾದ ಯೋಚನ ಲಹರಿಗೆಅವರು ಆರ್ಥಿಕವಾದ ಹೋರಾಟ ಎಂದು ಹೇಳಿದ್ದು.

ಹೇಳುವುದನ್ನು ಅವರು ಹೆಚ್ಚು ವಿಶ್ವಾಸದಿಂದ ಆಲಿಸ ತೊಡಗುತ್ತಾರೆ.

ಬಂಡವಾಳಶಾಹಿ ವ್ಯವಸ್ಥೆಯನ್ನು ಕೊನೆಗಾಣಿಸುವ ಹೋರಾಟವನ್ನು ಸಂಘಟಿಸ ಬೇಕಾದರೆ, ಬಂಡವಾಳಶಾಹಿ ವ್ಯವಸ್ಥೆಯೊಳಗೇ ಪಡೆಯಬಹುದಾದ ಚಿಲ್ಲರೆ ಬೇಡಿಕೆಗಳಿಗಾಗಿ ಹೋರಾಟ ನಡೆಸದೆ ಸಾಧ್ಯವಿಲ್ಲ ಎಂದರ್ಥ.

ಸ್ಟಾಲಿನ್‌ರವರ ಲೆನಿನ್‌ವಾದದ ಅಡಿಪಾಯಗಳು ಎಂಬ ಪುಸ್ತಕದಲ್ಲಿ ಸುಧಾರಣಾವಾದ ಹಾಗೂ ಕ್ರಾಂತಿಕಾರಿ ಸಿದ್ಧಾಂತದ ಬಗ್ಗೆ ಹೀಗೆ ಹೇಳಲಾಗಿದೆ. ಲೆನಿನಿಸಂ ಸುಧಾರಣೆಗಳಿಗೆ ಹಾಗೂ ರಾಜಿಗೆ ಒಟ್ಟಾರೆ ಎಲ್ಲಾ ಒಪ್ಪಂದಗಳಿಗೆ ವಿರೋಧವೆಂದು ಕೆಲವರು ಯೋಚಿಸುತ್ತಾರೆ.

Foundations of Leninism

ಎರಡು ಗುಂಪುಗಳು ಒಂದೊಂದನ್ನು ಒಂದೊಂದು ರೀತಿ ಬಳಸುತ್ತಿವೆ.

ಇಂದಿನ ಸಾಮಾಜಿಕ ವ್ಯವಸ್ಥೆಯ ಒಳಗೇ ನಿಂತು ಎಷ್ಟು ಹೆಚ್ಚು ಲಾಭಗಳಿಸಬಹುದೋ ಅಷ್ಟನ್ನೂ ಜನಗಳಿಗೆ ಗಳಿಸಿ ಕೊಡುವುದರಲ್ಲಿಯೇ ನಿಲ್ಲುವುದು ಒಂದು ರೀತಿ.

ಇಂದಿನ ಸಾಮಾಜಿಕ ವ್ಯವಸ್ಥೆಯ ನಾಲ್ಕು ಗೋಡೆಗಳ ಮಧ್ಯೆಗಳಿಸಬಹುದಾದ ಅತ್ಯಂತ ಹೆಚ್ಚು ಲಾಭವನ್ನು ಪಡೆಯುವುದಷ್ಟೇ ಅಲ್ಲದೆ ಈ ವ್ಯವಸ್ಥೆಯನ್ನು ಬುಡಮೇಲು ಮಾಡುವ ಕೆಲಸಕ್ಕೆ ಜನರನ್ನು ಸಜ್ಜುಗೊಳಿಸುವ ಕೆಲಸವನ್ನು ಮಾಡುವುದುಇನ್ನೊಂದು ರೀತಿ.

ಇದರಲ್ಲಿ ಮೊದಲನೆಯದೇ ಸುಧಾರಣಾವಾದಿ ರಾಜಕೀಯ, ಪರಿಷ್ಕರಣವಾದ ಎಂಬೆಲ್ಲಾ ಹೆಸರಿರುವ ಕ್ರಾಂತಿ ವಿರೋಧಿ ತತ್ವ.

ಎರಡನೆಯದಕ್ಕೆ ಮಾರ್ಕ್ಸ್‌ವಾದಿ-ಲೆನಿನ್‌ವಾದಿಗಳು ಇಟ್ಟಿರುವ ಹೆಸರು ಇಂದಿನ ಸಾಮಾಜಿಕ ಪರಿಸ್ಥಿತಿಯಲ್ಲಿರುವ ಎಲ್ಲಾ ಸೌಕರ್ಯಗಳನ್ನೂ ಉಪಯೋಗಿಸಿ ಕ್ರಾಂತಿಗೆ ಜನರನ್ನು ಸಜ್ಜುಗೊಳಿಸುವುದು, ಅದನ್ನು ಕ್ರಾಂತಿಗಾಗಿ ಉಪಯೋಗಿಸುವುದು ಎಂದು.

ಸುಧಾರಣಾವಾದವನ್ನು ಕಂಡು ಕ್ರುದ್ಧರಾಗಿ ಬೇರೆ ದಾರಿ ಹಿಡಿಯುವರನ್ನು ಕುರಿತೇ "ಎಡ ಪಂಥವಾದ ಒಂದು ಬಾಲಗ್ರಹ ದೋಷ" ಎಂಬ ಪುಸ್ತಕದಲ್ಲಿ ಲೆನಿನ್ ವಿಶ್ಲೇಷಣೆ ಮಾಡಿದ್ದಾರೆ. ಕಾರ್ಮಿಕ ರಂಗ ಹಾಗೂ ಸಂಸದೀಯ ರಂಗದಲ್ಲಿ ಹೇಗೆ ಕೆಲಸ ಮಾಡಬೇಕು ಎಂಬ ಬಗ್ಗೆ ಅತ್ಯಂತ ಉಜ್ವಲವಾಗಿ ವಿಶದೀಕರಿಸಿದ ಒಂದುಅಧ್ಯಾಯ ಆ ಪುಸ್ತಕದಲ್ಲಿದೆ. ಈ ಪ್ರಶ್ನೆಕಾರನು ಅದರಲ್ಲಿ ಕಾರ್ಮಿಕ ಸಂಘಗಳಿಗೆ ಸಂಬಂಧ ಪಟ್ಟ ವಿಷಯವನ್ನು ಶ್ರದ್ಧೆಯಿಂದ ಅಭ್ಯಾಸ ಮಾಡುವುದೊಳ್ಳೆಯದು.

○

ಪ್ರಶ್ನೆ

ತ್ಯಾಗಮಯವಾದ ಸಮರ ಧೀರ ಹೋರಾಟಗಳ ಮುಷ್ಕರಗಳ ಫಲವಾಗಿ ಕಾರ್ಮಿಕಸಂಘದ ಪ್ರತಿನಿಧಿಗಳು ಹಾಗೂ ಮಾಲೀಕರು ಅಥವಾ ಆಡಳಿತ ವರ್ಗದ ಪ್ರತಿನಿಧಿಗಳು ದೀರ್ಘಕಾಲದ ವೇತನ ಒಪ್ಪಂದಗಳನ್ನು ಮಾಡುತ್ತಾರಲ್ಲವೆ? ಅಲ್ಪಸ್ವಲ್ಪ ಕೊಟ್ಟು ತೆಗೆದುಕೊಳ್ಳುವ ನೀತಿಯನ್ನು ಅನುಸರಿಸುವುದು ಮಾಲೀಕರು ಶೋಷಣೆಯನ್ನು ಮುಂದುವರಿಸುವುದಕ್ಕೆ ಸಮ್ಮತಿ ಕೊಡುವಂತೆಯೇ ಅಲ್ಲವೆ?

ಹಾಗೆಂದ ಮಾತ್ರಕ್ಕೆ ಪ್ರಶ್ನೆಕಾರ ಯೋಚಿಸುವಂತೆ ಕಾರ್ಮಿಕ ಸಂಘದ ಪ್ರತಿನಿಧಿಗಳೂ ಮಾಲೀಕರ ಪ್ರತಿ ನಿಧಿಗಳೂ ಸೇವೆ ಮತ್ತು ವೇತನಗಳ ವ್ಯವಸ್ಥೆಯ ಬಗ್ಗೆ ದೀರ್ಘಕಾಲ ಒಪ್ಪಂದ ಮಾಡಬಾರದು ಎಂದಲ್ಲ.

ಅಲ್ಪ ಕಾಲವೇ ಆಗಲೀ ದೀರ್ಘ ಕಾಲವೇ ಆಗಲಿ ಮಾಲೀಕರ ಜೊತೆಯಲ್ಲಿ ಮಾಡುವ ಒಪ್ಪಂದದಿಂದ ಕಾರ್ಮಿಕರಿಗೆ ಹಾಗೂ ಇತರದುಡಿಯುವ ಜನರಿಗೆ ದಿನ ನಿತ್ಯದ ಜೀವನ ಒಂದೇ ಒಂದು ಅಂಗುಲ ಮುಂದೆ ಕೊಂಡು ಹೋಗಲು ಕಾರ್ಮಿಕ ವರ್ಗದ ಕ್ರಾಂತಿಕಾರಿಗಳು ಸಹಾಯ ಮಾಡಲೇಬೇಕು.

ಕಾರ್ಮಿಕ ವರ್ಗದ ಮತ್ತು ದುಡಿಯುವ ಜನ ವಿಭಾಗಗಳ ಜೀವನ ಮಟ್ಟದಲ್ಲಿ ಮಾತ್ರವಲ್ಲ ವರ್ಗ ಪ್ರಜ್ಞೆಯಲ್ಲಿಯೂ ಅವಶ್ಯವಾದ ಬದಲಾವಣೆಯನ್ನು ಅದು ಉಂಟುಮಾಡುತ್ತದೆ. (ಇಂತಹವು ಅನೇಕವು ಕೂಡಿ ಮೂಲಭೂತವಾದಪರಿವರ್ತನೆಗಳು)ಶೋಷಣಾಬದ್ಧ ವ್ಯವಸ್ಥೆಯನ್ನು ಕೊನೆಗಾಣಿಸಿ ಮಾನವರಲ್ಲಿ ಸಮಾನತೆ ಉಂಟಾಗುವುದಕ್ಕಾಗಿ ಕೈಗೊಳ್ಳುವ ಕೆಲಸಕ್ಕಾಗಿ ಜನಸಮೂಹಗಳನ್ನು ಸಜ್ಜು ಮಾಡುತ್ತದೆ.

ಸಂಘಟಿತವಾದ ಹೋರಾಟಗಳಿಂದ ಕೆಲವು ತುರ್ತು ಬೇಡಿಕೆಗಳನ್ನು ಈಡೇರಿಸಲು ಸಾಧ್ಯ ಎಂದು ಅನುಭವದಿಂದ ಜನ ಸಮುದಾಯದ ಮನಸ್ಸಿಗೆ ಅರಿವು ಮೂಡಿದರೆ ಆಗ ಶೋಷಣಾ ವ್ಯವಸ್ಥೆಯನ್ನು ಕೊನೆಗಾಣಿಸುವ ಹೆಚ್ಚಿನ ಪ್ರಧಾನವಾದ ಗುರಿಗೆ ಸಂಬಂಧಿಸಿ ಪಕ್ಷ

ಕಾರ್ಮಿಕ ಸಂಘಗಳು, ಜೊತೆಯಲ್ಲಿರುವ ಸಾಮೂಹಿಕ ಕೆಲಸಗಳೂ, ವಿಧಾನಸಭೆ ಹಾಗೂ ಸಂಸದೀಯ ರಂಗದ ಕೆಲಸಗಳೂ, ದಿನಪತ್ರಿಕೆ-ಮಾಸಪತ್ರಿಕೆಗಳನ್ನೂ ನಡೆಸುವುದೂ, ಕಲೆ ಮತ್ತು ಸಾಹಿತ್ಯ ರಂಗಗಳಲ್ಲಿ ನಡೆಸುವ ಕೆಲಸಗಳೂ, ಮುಂತಾದ ಎಲ್ಲಾ ರಂಗಗಳಲ್ಲಿ ಸುಧಾರಣಾವಾದಿ ಹಾಗೂ ಕ್ರಾಂತಿಕಾರಿ ಎರಡೂರೀತಿಯ ಕಾರ್ಯ ವಿಧಾನಗಳಿವೆ. ಒಂದೊಂದರಲ್ಲಿಯೂ ಕಾರ್ಮಿಕ ವರ್ಗ ಹಾಗೂ ದುಡಿಯುವ ಜನರು ಒಂದು ಕಡೆ ಶತ್ರುವರ್ಗದ ಜನರುಮತ್ತೊಂದು ಕಡೆ ಈ ಸಂಘರ್ಷ ನಡೆಯುತ್ತಿದೆ. ಈ

ದ. ಕ. ಜಿಲ್ಲಾ ರಾಜಕೀಯ ಸಮಾವೇಶ

ಅಕ್ಟೋಬರ್ 30 ರಂದು ಮಂಗಳೂರು ಟಾನ್‌ಹಾಲ್‌ನಲ್ಲಿ ದ.ಕ.ಜಿಲ್ಲಾ ರಾಜಕೀಯ ಸಮಾವೇಶವು ರಾಜ್ಯ ಸಮಿತಿ ಸೆಕ್ರಟಾರಿಯೇಟ್ ಸದಸ್ಯರಾದ ಕಾ.ಸಿ.ನಂಜುಂಡಪ್ಪನವರ ಅಧ್ಯಕ್ಷತೆಯಲ್ಲಿ ಜರುಗಿತು ಜಿಲ್ಲಾಕಾರ್ಯದರ್ಶಿ ಕಾ.ಕೆ.ಆರ್.ಶ್ರೀಯಾನ್‌ರವರು ಮೊದಲಿಗೆ ಸ್ವಾಗತಿಸಿದರು. ಸಭೆಯನ್ನುದ್ದೇಶಿಸಿ ರಾಜ್ಯ ಸಮಿತಿ ಕಾರ್ಯದರ್ಶಿ ಕಾ.ಪಿ. ರಾಮಚಂದ್ರರಾವ್, ಸೆಕ್ರಟಾರಿಯೇಟ್ ಸದಸ್ಯ ಕಾ.ವಿಜೆ.ಕೆ.ನಾಯರ್ ಮತ್ತು ರಾಜ್ಯ ಸಮಿತಿ ಸದಸ್ಯರಾದ ಕಾ.ಎಂ. ಎನ್.ಉಗ್ರಪ್ಪನವರು ಮಾತನಾಡಿದರು.

ರಾಜೀವಗಾಂಧಿ ಸರಕಾರದ ನೀತಿಯಿಂದಾಗಿ ದೇಶದಲ್ಲಿ ತೀವ್ರ ಬಿಕ್ಕಟ್ಟು ಬೆಳೆಯುತ್ತಿದ್ದು ದೇಶದ ಐಕ್ಯತೆ ಕೋಮು ಸಾಮರಸ್ಯ ಅಪಾಯದಲ್ಲಿದೆ. ಎಂದು ಎಚ್ಚರಿಸಿದ ಭಾಷಣಕಾರರು ಸಾಮ್ರಾಜ್ಯಶಾಹಿಯ ವಿರುದ್ಧ ದೇಶದ ಅಲಿಪ್ತ ನೀತಿ ರಕ್ಷಣೆಗೆ ಮಾಡಬೇಕೆಂದು ಕರೆ ನೀಡಿದರು. ರಾಜೀವ ಗಾಂಧಿ ಸರ್ಕಾರದ ಗಣಕೀಕರಣ, ತಾಂತ್ರಿಕತೆ ಮೇಲಿನ ಕುರುಡು ವ್ಯಾಮೋಹ, ಬಹುರಾಷ್ಟ್ರೀಯ ಕಂಪನಿಗಳಿಗೆ ಮುಕ್ತದ್ವಾರ ಆಮದು ರಫ್ತು ನೀತಿ ಫಲವಾಗಿ ದೇಶದ ಭಾರಿ ಸಮಸ್ಯೆಗಳು ಉದ್ಭವಿಸಿದ್ದು ಸರ್ಕಾರ ಜನತೆಯ ವಿಶ್ವಾಸ ಕಳೆದುಕೊಂಡಿದ್ದು ರಾಜೀವಗಾಂಧಿ ರಾಜಿನಾಮೆ ನೀಡಿ ಮಧ್ಯಂತರ ಚುನಾವಣೆ ಘೋಷಿಸಬೇಕೆಂದು ಒತ್ತಾಯಿಸಿದರು. ಜಿಲ್ಲೆಯ ವಿವಿಧ ತಾಲ್ಲೋಕಗಳಿಂದ ಒಂದು ಸಾವಿರದ ಐನೂರಕ್ಕೂ ಹೆಚ್ಚು ಪ್ರತಿನಿಧಿಗಳು ಈ ಸಮಾವೇಶದಲ್ಲಿ ಭಾಗವಹಿಸಿದ್ದರು. ಕೊನೆಗೆ ಕಾ.ಅಬ್ರಹಾಂಕರ್ಕಡ ಧನ್ಯವಾದವಿತ್ತರು.

○

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಯಶಸ್ವಿಗೊಂಡ ರಾಜಕೀಯ ಸಮಾವೇಶ

[4ನೇ ಪುಟದಿಂದ]

ಉತ್ತರ ಕನ್ನಡ ಜಿಲ್ಲೆ

ಜಿಲ್ಲೆಯ ಹಳಿಯಾಳ, ದಾಂಡೇಲಿ, ಹಾವೇರಿ, ಹಾನಗಲ್, ಸಿದ್ದಾಪುರ ಕಾರವಾರ, ಮುಂತಾದೆಡೆಗಳಿಂದ ಬಂದ 200ಕ್ಕೂ ಹೆಚ್ಚು ಮಂದಿ ಪಕ್ಷದ ಕಾರ್ಯಕರ್ತರು ಅಕ್ಟೋಬರ್ 29 ರಂದು ಸಿರಸಿ ನಗರದಲ್ಲಿ ಮೆರವಣಿಗೆ ನಡೆಸಿ ನಂತರ ಜಿಲ್ಲಾ ರಾಜಕೀಯ ಸಮಾವೇಶ ನಡೆಸಿದರು. ಕಾಂ ಧಾರೇಶ್ವರವರ ಸ್ವಾಗತದೊಡನೆ ಸಮಾವೇಶ ಆರಂಭಗೊಂಡಿತು.

ರಾಜ್ಯ ಸೆಕ್ರೆಟಾರಿಯೇಟ್ ಸದಸ್ಯರಾದ ಕಾಂ.ವಿ.ಜೆ.ಕೆ. ನಾಯರ್‌ರವರು ಸಮಾವೇಶ ಉದ್ಘಾಟಿಸಿ ಮಾತನಾಡಿದರು. ರಾಜೀವ್ ಗಾಂಧಿ ಸರ್ಕಾರದ ಆರ್ಥಿಕ ನೀತಿ ಉನ್ನತ ಮಟ್ಟದ ಭ್ರಷ್ಟಾಚಾರ, ಜನಸಾಮಾನ್ಯರ ಸಮಸ್ಯೆ ಬಗೆ ಹರಿಸುವಲ್ಲಿ ವಿಫಲವಾಗಿರುವ ಕಾರಣ ರಾಜೀನಾಮೆ ನೀಡಿ ಮಧ್ಯಂತರ ಚುನಾವಣೆ ನಡೆಸಲು ಒತ್ತಾಯಿಸಿದರು. ಸೆಕ್ರಟಾರಿಯೇಟ್ ಸದಸ್ಯ ಕಾಂ. ಕೆ ಆರ್. ಶ್ರೀಯಾನ್‌ರವ 17 ಅಂಶಗಳ ಬೇಡಿಕೆಗಳನ್ನು ವಿವರಿಸಿದರು. ಕಾಂ. ಪಿ.ಜಿ. ಮಶಾಲ್ದಿರವರು ನಿರ್ಣಯ ಮಂಡಿಸಿ ಮಾತನಾಡಿದರು. ನಿರ್ಣಯ ಬೆಂಬಲಿಸಿ ವಿವಿಧ ಸಂಗಾತಿಗಳು ಮಾತನಾಡಿದರು.

ಶಿವಮೊಗ್ಗ ಜಿಲ್ಲೆ

ಶಿವಮೊಗ್ಗದ ಕರ್ನಾಟಕ ಸಂಘ ಭವನದಲ್ಲಿ ಅಕ್ಟೋಬರ್ 28 ರಂದು ಶಿವಮೊಗ್ಗ ಜಿಲ್ಲಾ ರಾಜಕೀಯ ಸಮಾವೇಶ ಮತ್ತು ಸಂಜೆ ಬಹಿರಂಗಸಭೆ ಜರುಗಿತು. ಜಿಲ್ಲೆಯ ಸುಮಾರು 300 ಮಂದಿಗೂ ಹೆಚ್ಚು ಪ್ರತಿನಿಧಿಗಳು ಸಮಾವೇಶದಲ್ಲಿ ಭಾಗವಹಿಸಿದ್ದರು. ಪಕ್ಷದ ರಾಜ್ಯ ಮುಖಂಡರಾದ ಕಾಂ.ಪಿ. ರಾಮಚಂದ್ರರಾವ್, ಸಿ. ನಂಜುಂಡಪ್ಪ, ರಾಜ್ಯ ಸಮಿತಿ ಸದಸ್ಯರಾದ ಕಾಂ.ಎಂ.ಎನ್. ಉಗ್ರಪ್ಪನವರು ಮಾತನಾಡಿದರು. ಉನ್ನತಮಟ್ಟದಲ್ಲಿ ಭ್ರಷ್ಟಾಚಾರ, ಫೇರ್‌ಫಾಕ್ಸ್, ನಂತಹ ಹಲವಾರು ಹಗರಣಗಳಲ್ಲಿ ಕೋಟ್ಯಾಂತರ ರೂಪಾಯಿ ವಂಚನೆ ಮಾಡಿದ ರಾಜೀವ್‌ಗಾಂಧಿ ಸರ್ಕಾರ ಜನತೆಯ ಮೇಲೆ ವಿಪರೀತ ಕರ ಭಾರವನ್ನು ಹೆಚ್ಚಿಸಿ ಜನಸಾಮಾನ್ಯರನ್ನು ಸಂಕಷ್ಟಕ್ಕೀಡು ಮಾಡಿದೆ ಎಂದು ಆರೋಪಿಸಿದರು.

ಬಾಬರಿ ಮಸೀದಿ, ರಾಮಜನ್ಮ ಭೂಮಿ, ಗೂರ್ಖಾಲ್ಯಾಂಡ್, ಖಾಲಿಸ್ತಾನ್ ನಂತಹ ಪ್ರತ್ಯೇಕತಾವಾದಿ ಕೋಮುವಾದಿ ಶಕ್ತಿಗಳಿಂದ ದೇಶದ ಐಕ್ಯತೆಗೆ ಗಂಡಾಂತರ ಬಂದಿದೆ. ರಾಜೀವ್ ಗಾಂಧಿ ಸರ್ಕಾರ ದೇಶದ ಕೋಮು ಸಾಮರಸ್ಯ ಐಕ್ಯತೆ ಕಾಪಾಡುವುದರಲ್ಲಿ ವಿಫಲವಾಗಿದೆ. ದೇಶದಲ್ಲಿ 1ಲಕ್ಷ 40 ಸಾವಿರ ಕಾರ್ಖಾನೆಗಳು ಮುಚ್ಚಿವೆ. ರೈತರು ಬೆಳೆದ ಬೆಳೆಗೆ ನ್ಯಾಯವಾದ ಬೆಲೆ ಇಲ್ಲದೆ ಭೂ ಪ್ರಶ್ನೆ ಬಗೆ ಹರಿಸದೆ ರೈತ ಕಂಗಾಲಾಗಿದ್ದಾನೆಂದು ಭಾಷಣಕಾರರು ವಿವರಿಸಿದರು.

ಸಂಜೆ 6 ಗಂಟೆಗೆ ನಗರ ಸಭಾ ಆವರಣದಲ್ಲಿ ಬಹಿರಂಗ ಸಭೆ ನಡೆಯಿತು. ಪಕ್ಷದ ರಾಜ್ಯ ಮತ್ತು ಸ್ಥಳೀಯ ಮುಖಂಡರು ಸಭೆಯನ್ನುದ್ದೇಶಿಸಿ ಮಾತನಾಡಿದರು. ಸಮಾವೇಶದ ನಿರ್ಣಯಗಳನ್ನು ವಿವರಿಸಲಾಯಿತು. ಕಾಂ. ರಂಗೇಗೌಡ, ತಿರುಕಪ್ಪ ಮಾತನಾಡಿದರು. ಕಾಂ.ಕೆ.ಎಂ. ಶ್ರೀನಿವಾಸ್ ಅಧ್ಯಕ್ಷತೆ ವಹಿಸಿದ್ದರು. ಶಿವಮೊಗ್ಗ ಜಿಲ್ಲಾ ಪ್ರಾದೇಶಿಕ ಸಮಿತಿ ಕಾರ್ಯದರ್ಶಿ ಕಾಂ. ಎಸ್.ಬಿ.ಶಿವಶಂಕರ್ ಸ್ವಾಗತಿಸಿ ಬಿ.ಎಸ್.ದಾಸ್ ವಂದನಾರ್ಪಣೆ ಮಾಡಿದರು.

ಮಂಡ್ಯ

ಮಂಡ್ಯದ ಭಾರತೀನಗರ (ಕೆ.ಎಂ. ದೊಡ್ಡಿ)ದಲ್ಲಿ ನವಂಬರ್ 1ರಂದು ಮಂಡ್ಯಜಿಲ್ಲಾ ರಾಜಕೀಯ ಸಮಾವೇಶ ನಡೆಯಿತು.

ಸಿ.ಪಿ.ಐ.(ಎಂ) ರಾಜ್ಯ ಕಾರ್ಯದರ್ಶಿ ಕಾಂ.ಪಿ. ರಾಮಚಂದ್ರರಾವ್‌ರವರು ಸಭೆಯಲ್ಲಿ ಮಾತನಾಡಿ ದೇಶದಲ್ಲಿ ಕಾಂಗ್ರೆ ಆಡಳಿತ ನಿರ್ಮಿಸಿರುವ ಅಸ್ಥಿರ ಸ್ಥಿತಿಯ ಬಗ್ಗೆ ವಿವರಿಸಿ ಅದರ ವಿರುದ್ಧ ಪಕ್ಷ ರೂಪಿಸಿರುವ ಬದಲೀಧೋರಣೆಯ ಹೋರಾಟದ ಕುರಿತು ವಿವರಿಸಿದರು.

ಸೆಕ್ರಟಾರಿಯೇಟ್ ಸದಸ್ಯರಾದ ಕಾಂ.ಸಿ.ನಂಜುಂಡಪ್ಪನವರು ಮಾತನಾಡಿ ಸಾಮ್ರಾಜ್ಯಶಾಹಿಗಳ ದೇಶ ಮುರುಕ ಕೆಲಸವನ್ನು ಗಂಭೀರವಾಗಿ ಪರಿಗಣಿಸಿ ಕಾಂಗ್ರೆ ನೀತಿಯನ್ನು ಖಂಡಿಸಿದರು.

ಸಿ.ಪಿ.ಐ.(ಎಂ) ರಾಜ್ಯ ಸಮಿತಿ ಸದಸ್ಯ ಎಂ.ಎನ್. ಉಗ್ರಪ್ಪನವರು ಸಮಾವೇಶದ ಅಧ್ಯಕ್ಷತೆವಹಿಸಿದರು. ಮೈಸೂರು ಪ್ರಾದೇಶಿಕ ಸಮಿತಿ ಸದಸ್ಯ ಕಾಂ. ಆರ್. ಜಯಕುಮಾರ್ ಸ್ವಾಗತಿಸಿ ಕಾಂ. ಜಿ. ರಾಮಕೃಷ್ಣ ವಂದಿಸಿದರು.

ಚಿಕ್ಕಮಗಳೂರು

ಸಿ.ಪಿ.ಐ.(ಎಂ) ರಾಜ್ಯ ಸಮಿತಿಯ ಆದೇಶದ ಮೇರೆಗೆ ಚಿಕ್ಕಮಂಗಳೂರು ಜಿಲ್ಲೆಯ ರಾಜಕೀಯ ಸಮಾವೇಶ ಅಕ್ಟೋಬರ್ 28 ರಂದು ಚಿಕ್ಕಮಗಳೂರಿನಲ್ಲಿ ಶಿಕ್ಷಕರ ಭವನದಲ್ಲಿ ನೆರವೇರಿತು. ಪ್ರಸಿದ್ಧ ವಕೀಲರಾದ ಬಿ.ಎಸ್. ಹಾಲಪ್ಪನವರು ಅಧ್ಯಕ್ಷತೆ ವಹಿಸಿದ್ದರು. ವಿ.ಸುಕುಮಾರ ಅವರು ಸ್ವಾಗತ ಮಾಡುತ್ತ ಸಮಾವೇಶದ ಮಹತ್ವ ತಿಳಿಸಿ ಹೇಳಿದರು. ಸಿ.ಪಿ.ಐ.(ಎಂ) ರಾಜ್ಯ ಕಾರ್ಯದರ್ಶಿ ಪಿ.ರಾಮಚಂದ್ರರಾವ್, ಸೆಕ್ರೆಟಾರಿಯೇಟ್ ಸದಸ್ಯ ಸಿ.ನಂಜುಂಡಪ್ಪ, ರಾಜ್ಯ ರೈತ ಸಂಘದ ಅಧ್ಯಕ್ಷ ಎಂ.ಎನ್.ಉಗ್ರಪ್ಪನವರು ಭಾಷಣ ಮಾಡುತ್ತಾ ದೇಶದ ರಾಜಕೀಯ ಪರಿಸ್ಥಿತಿಯ ವಿಶ್ಲೇಷಣೆ ಮಾಡುತ್ತಾ ಬಂಡವಾಳಶಾಹಿ ಪಥದಲ್ಲಿ ದೇಶದ ಆರ್ಥಿಕ ನೀತಿಯು ಆಧರಿಸಿರುವುದರಿಂದ ಕಾಂಗ್ರೆಗಾಗಲೀ, ರಾಜೀವಗಾಂಧಿಯವರಿಗಾಗಲೀ, ಜನತೆಯ ಗಂಭೀರ ಸಮಸ್ಯೆಗಳನ್ನು ಸಮರ್ಪಕವಾಗಿ ಬಗೆಹರಿಸುವುದರಲ್ಲಿವಿಫಲಗೊಂಡಿರುವುದನ್ನು ವಿವರಿಸಿ, ಕಾಂಗ್ರೆಗೆ ಪರ್ಯಾಯ ಶಕ್ತಿ, ಬಿ.ಜೆ.ಪಿ,ಜನತಾ, ಲೋಕದಳಗಳಲ್ಲ, ಎಡ ಮತ್ತು ಜಾತ್ಯಾತೀತ ಶಕ್ತಿಗಳಿಂದ ಮಾತ್ರ ಅದು ಸಾಧ್ಯ.ಅದರ ಸಾಧನೆಗೆ ರೈತ, ಕಾರ್ಮಿಕರ, ದುಡಿಯುವ ಸಮಗ್ರ ಜನತೆಯ ಯುವಕರನ್ನೊಳಗೊಂಡ ಬಲಿಷ್ಠವಾದ ಚಳುವಳಿ ಸಂಘಟಿಸಿ ಪರ್ಯಾಯ ವ್ಯವಸ್ಥೆ ಮೂಡಿಬರಲು ಎಲ್ಲರೂ ದುಡಿಯಬೇಕೆಂದು ಕರೆನೀಡಿದರು. ಜಿ.ಎಸ್ ರಾಘವೇಂದ್ರ ವಂದನಾರ್ಪಣೆ ಸಲ್ಲಿಸಿದರು. ಮೂರುನೂರಕ್ಕು ಹೆಚ್ಚು ಮಹಿಳೆಯರನ್ನೊಳಗೊಂಡ ಪ್ರತಿನಿಧಿಗಳು ಹಾಜರಿದ್ದರು.

ಹಾಸನ

ಹಾಸನ ಜಿಲ್ಲಾ ರಾಜಕೀಯ ಸಮಾವೇಶ ನಗರದ ಸ್ಟೆಬರ್ಸ್ ಮೆಮೋರಿಯಲ್ ಹಾಲ್‌ನಲ್ಲಿ ಅಕ್ಟೋಬರ್ 25 ರಂದು ಕಾಂ.ವಿ.ಸುಕುಮಾರ್‌ರವರ ಅಧ್ಯಕ್ಷತೆಯಲ್ಲಿ ಜರುಗಿತು. ರಾಜ್ಯ ಸಮಿತಿ ಸೆಕ್ರಟಾರಿಯೇಟ್ ಸದಸ್ಯರಾದ ಕಾಂ. ಎನ್. ಕೆ. ಉಪಾಧ್ಯಾಯ ಹಾಗೂ ರಾಜ್ಯ ಸಮಿತಿ ಸದಸ್ಯರಾದ ಕಾಂ. ಎಂ.ಎನ್. ಉಗ್ರಪ್ಪನವರು ಸಮಾವೇಶವನ್ನುದ್ದೇಶಿಸಿ ಮಾತನಾಡಿದರು. ಸಮಾವೇಶಕ್ಕೆ ಜಿಲ್ಲೆಯ ನಾನಾ ಭಾಗಗಳಿಂದ ಸುಮಾರು 300ಕ್ಕೂ ಹೆಚ್ಚು ಪ್ರತಿನಿಧಿಗಳು ಪಾಲ್ಗೊಂಡಿದರು. ಕಾಂಗ್ರೆಸ್ ಆಡಳಿತದಲ್ಲಿ ದಿನ ನಿತ್ಯ ಬಳಕೆಯ ವಸ್ತುಗಳ ಬೆಲೆ ದಿನೇ ದಿನೇ ಏರಿಕೆಯಾಗುತ್ತಿದೆ.ಮತ್ತೊಂದೆಡೆ ಹಿಂದೂ-ಮುಸ್ಲಿಂ-ಸಿಖ್ ಪ್ರತ್ಯೇಕತಾವಾದಿಗಳಿಂದ ದೇಶದ ಐಕ್ಯತೆಗೆ ಗಂಡಾಂತರವಾಗಿದೆ. ರೈತರ ಭೂಮಿ ನಿರುದ್ಯೋಗಿ ಯುವಜನತೆಯ ಉದ್ಯೋಗದಂತಹ ಮೂಲಭೂತ ಸಮಸ್ಯೆಗಳು ಬಗೆ ಹರಿದಿಲ್ಲವೆಂದು ಭಾಷಣಕಾರರು ಹೇಳಿದರು. ಅಧ್ಯಕ್ಷತೆ ವಹಿಸಿಮಾತನಾಡಿದ ಕಾಂ.ವಿ.ಸುಕುಮಾರ್ 1979ರಲ್ಲಿ ಉಂಟಾದ ಜನತಾ ಸರ್ಕಾರದ ಪತನವನ್ನು ನಾವು ಗಮನಿಸಬೇಕೆಂದು ಹೇಳಿ ಎಡ-ಪ್ರಜಾಸತ್ತಾತ್ಮಕ ಪಕ್ಷಗಳ ಧೋರಣೆ ಆಧಾರದ ಕಾರ್ಯಕ್ರಮವೇ ಪರ್ಯಾಯವನ್ನು ಒದಗಿಸಲು ಸಾಧ್ಯವೆಂದು ಹೇಳಿದರು. ಕಾಂ.ಕೆ.ಟಿ.ರಾಘವೇಂದ್ರ ಮೊದಲಿಗೆ ಸ್ವಾಗತಿಸಿ ಕಾಂ. ಲೋಕೇಶ್ ವಂದಿಸಿದರು.

ಹರಪ್ಪನಹಳ್ಳಿ

ಹರಪನಹಳ್ಳಿಯಸಿಪಿಐ(ಎಂ) ಘಟಕವು ರಾಜೀವ್‌ಗಾಂಧಿ ರಾಜೀನಾಮೆ ಕೊಡಬೇಕು ಎಂಬ 17 ಬೇಡಿಕೆಗಳನ್ನೊತ್ತಾಯಿಸಲು ತಾಲ್ಲೂಕಿನಾದ್ಯಂತ ಪ್ರಚಾರ ಕಾರ್ಯಕ್ರಮ ರೂಪಿಸಿದೆ. 3.11.87 ರಿಂದ 13.11.87 ರವರೆಗೆ 11 ದಿನಗಳ ಸೈಕಲ್ ಜಾತವನ್ನು ಘಟಕದ ಸದಸ್ಯರು ಹಮ್ಮಿಕೊಳ್ಳಲ್ಲಿದ್ದಾರೆ. 11 ದಿನಗಳಲ್ಲಿ 65 ಹಳ್ಳಿಗಳಿಗೆ ಬೇಟಿ ನೀಡಿ ಪ್ರತೀಹಳ್ಳಿಯಲ್ಲಿ ಗೋಡೆಬರಹ ಸಹಿಸಂಗ್ರಹ, ಬಹಿರಂಗ ಸಭೆಗಳನ್ನು ನಡೆಸಿ 16-11-87 ರಂದು ತಾಲ್ಲೂಕು ಕೇಂದ್ರದಲ್ಲಿ ಬಹಿರಂಗ ಸಭೆಯನ್ನು ನಡೆಸಲಾಗುತ್ತದೆ. ಎಂದು ಹರಪ್ಪನಹಳ್ಳಿ ಘಟಕದ ಕಾರ್ಯದರ್ಶಿ ಕಾ ಬಿ. ಪರಶುರಾಮ್ ತಿಳಿಸಿದ್ದಾರೆ.

ಡಿ. ವೈ. ಎಫ್. ಐ. ಬಿಜಾಪುರ ಜಿಲ್ಲಾ ಸಮಾವೇಶ

ಭಾರತ ಪ್ರಜಾಸತ್ತಾತ್ಮಕ ಯುವ ಜನ ಫೆಡರೇಷನ್ (ಡಿ.ವೈ.ಎಫ್.ಐ.) ಬಿಜಾಪುರ ಜಿಲ್ಲಾ ಸಮಾವೇಶ ಅ.20 ರಂದು ಬಿಜಾಪುರದ ರೈತ ಸಂಘದ ಕಛೇರಿಯಲ್ಲಿ ಜರುಗಿತು. ಜಿಲ್ಲೆಯ ವಿವಿಧ ತಾಲ್ಲೋಕಿನ ನೂರಾರುಕಾರ್ಯಕರ್ತರು ಸಮಾವೇಶದಲ್ಲಿ ಭಾಗವಹಿಸಿದ್ದರು. ಜಿಲ್ಲಾ ಕಾರ್ಯದರ್ಶಿ ಕಾ.ಸದಾನಂದಮೋದಿ ಸ್ವಾಗತಿಸಿದರು. ಸಿ ಪಿ ಐ (ಎಂ) ಪಕ್ಷದ ಸೆಕ್ರಟೇರಿಯಟ್ ಸದಸ್ಯರಾದ ಕಾ.ಎನ್.ಕೆ.ಉಪಾದ್ಯಾಯರು ಮಾತನಾಡಿ ಸ್ವಾತಂತ್ರ್ಯ ನಂತರದ ಭಾರತದಲ್ಲಿ ನಿರುದ್ಯೋಗ ಸಮಸ್ಯೆ ಹಾಗೂ ಸೋವಿಯೆತ್‌ರಷ್ಯಾದ ಪ್ರಗತಿ ಕುರಿತು ವಿವರಿಸಿದರು. ಜಿಲ್ಲಾ ಉಪಾಧ್ಯಕ್ಷ ಮನ್ನುಸಾಬ ಕಲಾದಗಿ ಎಸ್.ಎಫ್.ಐ.ನಶ್ರೀಧರಕುಲಕರ್ಣಿ,ಅಣ್ಣಾರಾಯ ಇಳಗೇರಾರವರುಗಳು ಮಾತನಾಡಿ ದೇಶದ ಐಕ್ಯತೆ ಸಮಗ್ರತೆಗೆ ಅಪಾಯ ತಂದಿರುವ ಛಿದ್ರಕಾರಿ-ಕೋಮುವಾದಿ ಶಕ್ತಿಗಳ ವಿರುದ್ಧ ಜನರಲ್ಲಿ ಜಾಗೃತಿಯನ್ನುಂಟು ಮಾಡಲು ಕರೆ ನೀಡಿದರು. ಕಾ.ಆರ್.ಹೆಚ್.ಕಲಾದಗಿ ಮಾಸ್ತರು ಅಧ್ಯಕ್ಷತೆ ವಹಿಸಿದ್ದರು. ಕಾ.ಎನ್.ಆರ್.ನದಾಫ್ ವಂದನಾರ್ಪಣೆ ಮಾತನಾಡಿದರು. ನಂತರ ಸುಮಾರು ಎರಡು ಸಹಸ್ರ ಯುವ ಜನರ ಬೃಹತ್ ರ್‍ಯಾಲಿ ನಗರದ ಪ್ರಮುಖ ಬೀದಿಗಳಲ್ಲಿ ಹಾಯ್ದು ಉದ್ಯೋಗ ವಿನಿಮಯ ಕಛೇರಿ, ಜಿಲ್ಲಾಧಿಕಾರಿ ಕಛೇರಿ, ಜಿಲ್ಲಾ ಪರಿಷತ್ ಕಛೇರಿಗಳಿಗೆ ತೆರಳಿ ಮತ ಪ್ರದರ್ಶನ ಮಾಡಿ ಮನವಿ ಅರ್ಪಿಸಲಾಯಿತು. ಕಾ.ಶಿವಶರಣಸಿಂಗಾಡೆ ಸದಾಶಿವಗೊಂದಕರ, ಗುರುನಾಗರಾಳ, ಬಿ.ಎಸ್.ಹಾಂಜಿಗಿ ಮುಂತಾದವರು ಮೆರವಣಿಗೆ ನಾಯಕತ್ವ ವಹಿಸಿದ್ದರು. ○

ಮಲ್ಪೆ ಪ್ರದೇಶ ಬೀಡಿ ಸಂಘದ ಮಹಾಸಭೆ

ಮಲ್ಪೆ ಪ್ರದೇಶ ಬೀಡಿ ಕೆಲಸಗಾರರ ಸಂಘದ ವಾರ್ಷಿಕ ಮಹಾ ಸಭೆಯು ಅ.11 ರಂದು ಕೊಡೂರು ಶಾಲಾ ವಠಾರದಲ್ಲಿ ಜರುಗಿತು. ಅಧ್ಯಕ್ಷತೆಯನ್ನು ಕಾ. ಸಾಧು ಅಮೀನ್ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ದ.ಕ. ಜಿಲ್ಲಾ ಬೀಡಿ ಯೂನಿಯನ್‌ನ ಉಡುಪಿ ತಾಲೂಕು ಸಮಿತಿಯ ಕಾರ್ಯದರ್ಶಿ ಕಾ. ರಮೇಶ ಮೆಂಡನ್ ಮತ್ತು ಕಾ. ಶೇಷ ಪೂಜಾರಿ ಮಾತನಾಡಿದರು.

ಶೇಕಡಾ 20ರಂತೆ ಬೋನಸ್ ನೀಡಬೇಕು ಮತ್ತು ಇ.ಎಸ್.ಐ. ಸವಲತ್ತನ್ನು ಬೀಡಿ ಕಾರ್ಮಿಕರಿಗೂ ಅನ್ವಯಿಸಬೇಕು ಎಂಬ ಎರಡು ಬೇಡಿಕೆಗಳ ಠರಾವು ಅಂಗೀಕರಿಸಲಾಯಿತು. ವರದಿಯನ್ನು ಕೆ. ಶಂಕರ್‌ರವರು ಮತ್ತು ಲೆಕ್ಕ ಪತ್ರವನ್ನು ರಮೇಶ ಜತ್ತನ್ನ ಮಂಡಿಸಿದರು.

ಮುಂದಿನ ಸಾಲಿಗೆ ಕೆ. ಬಾಬ ಅಧ್ಯಕ್ಷರಾಗಿ, ರಾಮ ಸೇರಿಗಾರ ಮತ್ತು ಕೃಷ್ಣ ಎಸ್. ಅಮೀನ್ ಉಪಾಧ್ಯಕ್ಷರಾಗಿ, ದೋಗು ಸುವರ್ಣ ಕಾರ್ಯದರ್ಶಿಯಾಗಿ, ರಾಮಸ್ವಾಮಿ ಮತ್ತು ಸುಮತಿ ಜತೆ ಕಾರ್ಯದರ್ಶಿಗಳಾಗಿ ಮತ್ತು ರಮೇಶ ಜತ್ತನ್ನ ಕೋಶಾಧಿಕಾರಿಯಾಗಿ ಆಯ್ಕೆಯಾದರು.

ಸಭೆಯ ಆರಂಭದಲ್ಲಿ ಕೃಷ್ಣ ಎಸ್. ಅಮೀನ ಸ್ವಾಗತಿಸಿ ಕೊನೆಗೆ ಕೆ. ದೋಗು ಸುವರ್ಣರು ವಂದನಾರ್ಪಣೆ ಮಾಡಿದರು. ●

ಕಿರ್ಲೋಸ್ಕರ್ ಕಾರ್ಮಿಕರ ಸಂಘದ ಒಪ್ಪಂದ

ಮೈಸೂರು ಕಿರ್ಲೋಸ್ಕರ ಆಡಳಿತ ವರ್ಗ ಮತ್ತು ಸಿ.ಐ.ಟಿ.ಯು.ಸಂಯೋಜಿತ ಮೈಸೂರ್ ಕಿರ್ಲೋಸ್ಕರ ಕೆಲಸಗಾರರ ಸಂಘದ ಮಧ್ಯೆ ಮಾತುಕತೆ ನಡೆದು ಅಕ್ಟೋಬರ್.15 ರಂದು ಬೆಂಗಳೂರಿನಲ್ಲಿ ಜಂಟಿ ಕಾರ್ಮಿಕ ಆಯುಕ್ತರು ನಡೆಸಿದ ಸಂಧಾನ ಸಭೆಯಲ್ಲಿ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಒಪ್ಪಂದವು ದಿ 1-7-1987 ರಿಂದ 3 ವರ್ಷಗಳವರೆಗೆ ಜಾರಿಯಲ್ಲಿ ಇರುತ್ತದೆ.

ಒಪ್ಪಂದಕ್ಕೆ ಆಡಳಿತ ವರ್ಗದ ಪರವಾಗಿ ಶ್ರೀ ದಿವಾಕರಭಟ್, ಎಂ.ಎಲ್. ನಂದಕುಮಾರ್, ಎಸ್.ಎನ್.ತಂಬೀ, ಎಸ್.ಎಂ.ದೂದ್‌ವಾಲಿ, ಎಂ.ಹಾಲಪ್ಪ ಮತ್ತು ಜಿ.ಜಿ.ಹಳೀಮನಿ ಸಹಿ ಹಾಕಿರುತ್ತಾರೆ. ಕಾರ್ಮಿಕರನ್ನು ಪ್ರತಿನಿಧಿಸಿ ಮೈಸೂರ್ ಕಿರ್ಲೋಸ್ಕರ ಕೆಲಸಗಾರರ ಸಂಘದ ಅಧ್ಯಕ್ಷರಾದ ಕಾ.ವಿ.ಜೆ.ಕೆ. ನಾಯರ್, ನಿತ್ಯಾನಂದಸ್ವಾಮಿ, ಮುಂತಾದ ನಾಯಕರು ಸಹಿಹಾಕಿರುತ್ತಾರೆ.

ಕನಿಷ್ಠವೇತನದಲ್ಲಿ 50ರೂ.ಹೆಚ್ಚಳ, ತುಟ್ಟಿಭತ್ಯೆ, ಇಂಕ್ರಿಮೆಂಟ್ ಹೆಚ್ಚಳ, ಮನೆಬಾಡಿಗೆ, ಇ.ಎಸ್.ಐ, ಸಿ.ಐ ಟಿ. ಯು. ಸಂಘಕ್ಕೆ ಸಾಮೂಹಿಕಚೌಕಾಸಿಯ ಏಕೈಕ ನಿಯೋಗ ಎಂದು ಆಡಳಿತ ವರ್ಗ ಒಪ್ಪಿಕೊಂಡಿದೆ. ○

ಜಲಮಂಡಳಿ ಅಧಿಕಾರಿ ವಜಾಕ್ಕೆ ಒತ್ತಾಯ

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಬಳ್ಳಾರಿಯ ಅಧಿಕಾರಿಗಳು ನೀರಿನ ಶುದ್ಧೀಕರಣಕ್ಕಾಗಿ ಬಳಸುವ ಅಲ್ಯೂಮಿನಿಯಂ ಸಲ್ಫೇಟ್ ರಸಾಯನಿಕ ಉಪಯೋಗದಲ್ಲಿ ದುರುಪಯೋಗಪಡಿದಸಿ ಪ್ರಕರಣ ವರದಿಯಾಗಿದೆ. ಜನರ ಆರೋಗ್ಯಕ್ಕೆ ಹಾನಿಮಾಡುವ ಅಲ್ಯೂಮಿನಿಯಂ ಸಲ್ಫೇಟ್ ಬಳಸಿ ಅಲಂ ಸಪ್ಲೈ ಮಾಡುವಕಂಪನಿಯಿಂದ ಲಂಚ ಮತ್ತು ಕಮಿಷನ್ ಸ್ವೀಕರಿಸಿದವಿರುದ್ಧ ಸ್ಥಳೀಯ ಸಿ.ಪಿ.ಐ.(ಎಂ) ಮತ್ತು ಡಿ. ವೈ.ಎಫ್.ಐ. ಅಕ್ಟೋಬರ್ 5 ರಂದು ಜಿಲ್ಲಾಧಿಕಾರಿ ಹಾಗೂಉಪಲೋಕಾಯುಕ್ತರಿಗೆ ದೂರು ಸಲ್ಲಿಸಿವೆ.

ಸರ್ಕಾರ ಈ ಪ್ರಕರಣ ಕುರಿತು ತನಿಖೆ ನಡೆಸಿ ಜನರ ಜೀವಗಳನ್ನು ರಕ್ಷಿಸಬೇಕೆಂದು ಹಾಗೂ ಈ ಘಟನೆಗೆ ಕಾರಣವಾದಅಧಿಕಾರಿಯನ್ನು ಕೂಡಲೇ ವಜಾ ಮಾಡಬೇಕೆಂದು ಜನಾಭಿಪ್ರಾಯ ರೂಪಿಸಲು ಸಹಿಸಂಗ್ರಹ ಚಳುವಳಿ ರೂಪಿಸಲಾಗುತ್ತಿದೆ.

ಸೋವಿಯೆತ್ ವಿದೇಶಾಂಗ ನೀತಿ ಸದಾ ಶಾಂತಿಗೆ ಒತ್ತು ನೀಡಿದೆ

“ಸೋವಿಯೆತ್ ಒಕ್ಕೂಟ ಲೆನಿನ್ ಹಾಕಿ ಕೊಟ್ಟ ಶಾಂತಿಯ ಮೇಲೆ ಒತ್ತು ನೀಡುವ ವಿದೇಶಾಂಗ ಧೋರಣೆಯನ್ನೇ ಸದಾ ಪಾಲಿಸುತ್ತಾ ಬಂದಿದೆ. ಪ್ರಕ್ಷೇಪಾಸ್ತ್ರ ನಿರೋಧಕ ಸಂಧಿಯನ್ನು ಪಾಲಿಸುತ್ತಾ ಸಾಮರಿಕಾ ಶಸ್ತ್ರಾಸ್ತ್ರಗಳ ಕಡಿತ ಸಾಧ್ಯವಾಗುವಂತಹ ಪರಿಹಾರಗಳನ್ನು ಕಂಡು ಹಿಡಿಯಲು ನಾವು ಅವಿರತ ದುಡಿಯುತ್ತೇವೆ. ಅಮೆರಿಕಾದಿಂದಲೂ ನಾವು ಇದನ್ನೇ ನಿರೀಕ್ಷಿಸುತ್ತೇವೆ. ನಮ್ಮ ಈ ಕಾಲಘಟ್ಟದ ಮಹತ್ವವನ್ನು ತಾನು ಅರಿತುಕೊಂಡಿದ್ದೇನೆಂದು ಅದು ತೋರಿಸಿಕೊಡುತ್ತದೆಂದು ನಾವು ನಿರೀಕ್ಷಿಸುತ್ತೇವೆ” ಎಂದು ಸಿ.ಪಿ.ಎಸ್.ಯು. ಪ್ರಧಾನ ಕಾರ್ಯದರ್ಶಿ ಮಿಖ್ಯಾಲ್ ಗೋರ್ಬಚೆವ್ ಹೇಳಿದ್ದಾರೆ. ಅವರು ಪಕ್ಷದ ಕೇಂದ್ರ ಸಮಿತಿಯ ಅಕ್ಟೋಬರ್ ಕ್ರಾಂತಿಯ 70 ನೇಯ ವಾರ್ಷಿಕೋತ್ಸವ ಸ್ಮರಣಾರ್ಥ ಸಭೆಯನ್ನುದ್ದೇಶಿಸಿ ಮಾತನಾಡುತ್ತಿದ್ದರು. ಮಧ್ಯಗಾಮೀ ಕ್ಷಿಪಣಿಗಳ ಕುರಿತಾದ ಮುಂಬರುವ ಶೃಂಗ ಸಭೆಯಲ್ಲಿ ಸಹಿ ಹಾಕಲ್ಪಡುವ ಚಾರಿತ್ರಿಕ ಸಂಧಿ ನಿಶ್ಶಸ್ತ್ರೀಕರಣದತ್ತ ಇನ್ನೂ ತೀವ್ರವಾಗಿ ಹೆಜ್ಜೆಗಳನ್ನಿಡಲು ಪ್ರೇರಣೆ ನೀಡಲಿದೆ ಎಂದು ಅವರು ಹೇಳಿದರು.

“ಇತ್ತೀಚಿನ ದಶಕಗಳಲ್ಲಿ ಬಂಡವಾಳಶಾಹೀ ವ್ಯವಸ್ಥೆಯೊಳಗೇ ಹೊಸ ರೀತಿಯ ಸಾಮಾಜಿಕ ಆಂದೋಲನಗಳು ವೈರುಧ್ಯಗಳು ಮೂಡಿಬಂದಿವೆ. ಬಂಡವಾಳಶಾಹೀ ವ್ಯವಸ್ಥೆ ಒಂದು ಪರಮಾಣು ರಹಿತ, ಶಸ್ತ್ರ ರಹಿತ ಹೊಸ ಆರ್ಥಿಕ ವ್ಯವಸ್ಥೆಯ ಜಗತ್ತಿಗೆ ತನ್ನನ್ನು ಅಳವಡಿಸಿಕೊಳ್ಳಲು ಸಮರ್ಥವಾಗುತ್ತದೆಯೇ ಎಂದು ನಾವು ಪರಿಶೀಲಿಸಬೇಕಾಗಿದೆ” ಎಂದ ಕಾಂ.ಗೋರ್ಬಚೆವ್ ಅಂತರಾಷ್ಟ್ರೀಯ ಕಮ್ಯುನಿಸ್ಟ್ ಆಂದೋಲನದ ಉತ್ತಮ ಇತಿಹಾಸದ ಪರಾಮರ್ಶೆ ಮಾಡುತ್ತಾ ಈ ಶತಮಾನದ ಅಂತ್ಯದಹೊತ್ತಿಗೆ ಕಾಣಬರಲಿರುವ ತೀವ್ರ ಬದಲಾವಣೆಗಳ ಮುನ್ನಡೆಯಲ್ಲಿ ತಮ್ಮ ಸ್ಥಾನ ಪಡೆಯಲು ಕಮ್ಯುನಿಸ್ಟ್ ಪಕ್ಷಗಳು ಶ್ರಮಿಸುತ್ತಿವೆ ಎಂದರು.

ಸಾಲ್ವಡೋರ್, ಗ್ವಾಟೆಮಾಲಾದಲ್ಲೂ ಶಾಂತಿ ಪ್ರಕ್ರಿಯೆ

ಆಗಸ್ಟ್ 7ರಂದು ಗ್ವಾಟೆಮಾಲಾ ನಗರದಲ್ಲಿ ಸಹಿ ಹಾಕಲ್ಪಟ್ಟ ಮಧ್ಯ ಅಮೇರಿಕಾ ಶಾಂತಿ ಯೋಜನೆಯ ಅಂಶಗಳನ್ನು ನಿಕಾರಗುವಾ ಗಡುವಿಗೆ ಮುಂಚೆಯೇ ಜ್ಯಾರಿಗೊಳಿಸಲಾರಂಭಿಸಿದ ಸುದ್ದಿ ‘ಐಕ್ಯರಂಗ’ದ ಓದುಗರಿಗೆ ತಿಳಿದಿದೆ. ಇನ್ನೆರಡು ಮಧ್ಯ ಅಮೇರಿಕಾ ದೇಶಗಳಾದ ಗ್ವಾಟೆಮಾಲಾ ಹಾಗೂ ಎಲ್‌ಸಾಲ್ವಡೋರ್‌ಗಳಲ್ಲೂ ಈ ಪ್ರಕ್ರಿಯೆ ಆರಂಭವಾಗಿರುವುದು ಈ ಶಾಂತಿ ಒಪ್ಪಂದದ ಒಂದು ಮಹತ್ವದ ಫಲಿತಾಂಶ.

ಗ್ವಾಟೆಮಾಲಾದ ಅಧ್ಯಕ್ಷ ಸೆರೆಝೋ ಹಾಗೂ ಸೈನಿಕ ಮುಖಂಡರು ಅಲ್ಲಿ ವಿಮೋಚನಾ ಪಡೆಗಳು ಶಸ್ತ್ರತ್ಯಾಗ ಮಾಡದಿದ್ದರೆ ಮಾತುಕತೆ ಸಾಧ್ಯವೇ ಇಲ್ಲ ಎಂಬ ತಮ್ಮ ನಿಲುವು ಬಿಟ್ಟು 26 ವರ್ಷಗಳ ವಿಮೋಚನಾ ಹೋರಾಟದ ಇತಿಹಾಸದಲ್ಲಿ ಮೊತ್ತ ಮೊದಲ ಬಾರಿಗೆ ಸಮರವಿರಾಮ ಘೋಷಿಸಿ ವಿಮೋಚನಾ ಆಂದೋಲನಗಳ ಮುಖಂಡರೊಂದಿಗೆ ಅಕ್ಟೋಬರ್ 2ರಿಂದ 7ರ ವರೆಗೆ ಮಾತುಕತೆ ನಡೆಸಿದ್ದಾರೆ. ಗ್ವಾಟೆಮಾಲಾ ವಿಮೋಚನಾ ಹೋರಾಟಗಾರರು ಅಧಿಕಾರದಲ್ಲಿ ಪಾಲು ಕೇಳುವ ಬದಲು ಭೂಸುಧಾರಣೆ, ರಾಜಕೀಯ ಜೀವನದಲ್ಲಿ ರೈತರು ಹಾಗೂ ಕಾರ್ಮಿಕ ಸಂಘಗಳು ಹೆಚ್ಚೆಚ್ಚು ಭಾಗವಹಿಸಲು ಅವಕಾಶ, ಹಳ್ಳಿಗಳಿಂದ ಸೈನ್ಯಗಳನ್ನು ತೆಗೆಯುವುದುಇತ್ಯಾದಿಬೇಡಿಕೆಗಳನ್ನಿಟ್ಟದ್ದಾರೆ.

ಎಲ್‌ಸಾಲ್ವಡೋರ್‌ನಲ್ಲಿ ಅಕ್ಟೋಬರ್ 4 ಮತ್ತು 5ರಂದು ಅಧ್ಯಕ್ಷ ದುವಾರ್ಟೆ ಹಾಗೂ ವಿವಿಧ ವಿಮೋಚನಾ ಸಂಘಟನೆಗಳ ನಡುವೆ ನಡೆದ ಮಾತುಕತೆಗಳಲ್ಲಿ ನಂತರ ಎರಡು ಆಯೋಗಗಳನ್ನು ರಚಿಸಲು ನಿರ್ಧರಿಸಲಾಯಿತು–ಒಂದು ಆಯೋಗ ಸಮರ ವಿರಾಮದ ಬಗ್ಗೆ ಅಧ್ಯಯನ ನಡೆಸುತ್ತದೆ. ಇನ್ನೊಂದು ಶಾಂತಿ ಯೋಜನೆಯ ಇತರ ಅಂಶಗಳ ಜ್ಯಾರಿಯ ಬಗ್ಗೆ ಪರಿಶೀಲಿಸುತ್ತದೆ.

ಈ ನಡುವೆ ನಿಕಾರಗುವಾ ಶಾಂತಿ ಯೋಜನೆ ತಮ್ಮ “ರಾಷ್ಟ್ರೀಯ ಭದ್ರತೆ”ಗೆ ಅನುಗುಣವಾಗಿಲ್ಲ ಎಂದು ಹೇಳಿ ಅದನ್ನು ಬುಡಮೇಲು ಮಾಡಲು ರೇಗನ್ ಆಡಳಿತ ಬಹಿರಂಗವಾಗಿಯೇ ಪ್ರಯತ್ನಗಳನ್ನು ನಡೆಸುತ್ತಿದೆ.

ಉತ್ತರ ಪ್ರದೇಶ :

ಲಕ್ನೋದಲ್ಲಿ ಚರಿತ್ರಾರ್ಹ ರ್‍ಯಾಲಿ

ಲಕ್ನೋದ ಚರಿತ್ರೆಯಲ್ಲೇ ಹಿಂದೆಂದೂ ಕಂಡಿರದಿದ್ದ ಬೃಹತ್ ಸಭೆಯೊಂದು ಅಕ್ಟೋಬರ್ 15 ರಂದು ಜರುಗಿತು.‘ರಾಜೀವ್‌ಗಾಂಧಿ ತೊಲಗಲಿ ಚುನಾವಣೆ ನಡೆಯಲಿ’ ಎಂಬ ಘೋಷಣೆಯೊಂದಿಗೆ ರಾಜ್ಯದಎಲ್ಲೆಡೆಗಳಿಂದಲೂ ಹರಿದು ಬಂದ ಜನ ಪ್ರವಾಹ ಬೇಗಂ ಹಜರತ್ ಮಹಲ್ ಉದ್ಯಾನವನವನ್ನು ಜನ ಸಾಗರವನ್ನಾಗಿ ಪರಿವರ್ತಿಸಿತು. ಸಿ.ಪಿ.ಐ.(ಎಂ) ಸಿ.ಪಿ.ಐ. ಮತ್ತು ಕ್ರಾಂತಿಕಾರೀ ಮೋರ್ಚಾ ಸಂಯುಕ್ತವಾಗಿ ಸಂಘಟಿಸಿದ್ದ ಈ ಸಭೆಯಲ್ಲಿ ಸುಮಾರು ಮೂರು ಲಕ್ಷ ಜನ ಭಾಗವಹಿಸಿದ್ದರು. ರಾಜ್ಯದ ವಿವಿಧ ಭಾಗಗಳಿಂದ ರೈಲುಗಳಲ್ಲಿ ಬಸ್ಸುಗಳಲ್ಲಿ ಗಂಡಸರು ಹೆಂಗಸರು, ಯುವಕರು ತಂಡೋಪತಂಡಗಳಾಗಿ ಬಂದಿಳಿದರು. ರಸ್ತೆಗಳ ತುಂಬಾ ಕೇವಲ ಕೆಂಬಾವುಟಗಳು, ಬ್ಯಾನರುಗಳು ತುಂಬಿ ಹೋಗಿದ್ದವು, ವಾಹನ ಸಂಚಾರಬೆಳಗಿನಿಂದಲೇ ನಿಂತು ಹೋಗಿತ್ತು.ಬಹುಪಾಲು ಅಂಗಡಿಗಳೂ ತೆರೆಯಲು ಸಾಧ್ಯವಾಗಲಿಲ್ಲ. ಸಭೆ ನಡೆಯುವ ಉದ್ಯಾನವನದ ಸುತ್ತಮುತ್ತಲ ರಸ್ತೆಗಳೆಲ್ಲಾ ಪ್ರದರ್ಶನಕಾರರನ್ನು ಕರೆದುತಂದಿದ್ದ ಬಸ್ಸುಗಳಿಂದ ತುಂಬಿ ಹೋಗಿದ್ದವು. ಲಕ್ನೋದ ಸಾಮಾನ್ಯ ಜನಜೀವನವೇ ಅಸ್ತವ್ಯಸ್ತಗೊಂಡಿತ್ತು. ಇಡೀ ನಗರ ಜನರ ಉತ್ಸಾಹದ ಗದ್ದಲದಲ್ಲಿ ಗಿಜಿಗುಟ್ಟುತ್ತಿತ್ತು.

ಬೃಹತ್‌ಸಭೆಯನ್ನುದ್ದೇಶಿಸಿ ಹೆಚ್ಚು ಕಡಿಮೆ ಎಲ್ಲಾ ಎಡ,ಪ್ರಜಾಸತ್ತಾತ್ಮಕ, ಜಾತ್ಯಾತೀತ ವಿರೋಧ ಪಕ್ಷಗಳ ಮುಖಂಡರುಗಳೂ ಮಾತನಾಡಿದರು. ಸಿ.ಪಿ.ಐ.[ಎಂ]ನ ಪ್ರ.ಕಾರ್ಯದರ್ಶಿ ಕಾ.ಇ.ಎಂ.ಎಸ್.ನಂಬೂದಿರಿಪಾದ್, ಪಿ.ಬಿ ಸದಸ್ಯರಾದ ಕಾ.ಹರಕಿಶನ್‌ಸಿಂಗ್ ಸುರ್ಜಿತ್, ಸಿ.ಪಿ.ಐ ನ ಪ್ರ.ಕಾರ್ಯದರ್ಶಿ ಕಾ.ಸಿ.ರಾಜೇಶ್ವರರಾವ್ ಲೋಕದಳ [ಬಿ] ಅಧ್ಯಕ್ಷಹೆಚ್.ಎನ್.ಬಹುಗುಣ, ಜನತಾ ಪಕ್ಷದಅಧ್ಯಕ್ಷ ಚಂದ್ರಶೇಖರ್, ಕರ್ನಾಟಕದ ಮುಖ್ಯಮಂತ್ರಿ ರಾಮಕೃಷ್ಣಹೆಗ್ಗಡೆ ಮುಂತಾದವರು ಮಾತನಾಡಿದರು. ಮಾತನಾಡಿದ ಎಲ್ಲಾ ನಾಯಕರುಗಳೂ ಕಾ:ಇ.ಎಂ.ಎಸ್. ನಂಬೂದಿರಿಪಾದರಂತಹ ರೈತಕಾರ್ಮಿಕ ಮುಖಂಡರು ಸಭೆಯಲ್ಲಿ ಉಪಸ್ಥಿತರಿದ್ದು ಉತ್ತರ ಪ್ರದೇಶ ಕ್ರಾಂತಿಕಾರೀ ಮೋರ್ಚಾಗೆ ಮಾರ್ಗದರ್ಶನ ನೀಡಿ ಪ್ರೋತ್ಸಾಹಿಸುತ್ತಿರುವುದನ್ನು ಪ್ರಶಂಸಿಸಿದರು

ಕಾ.ಇ.ಎಂ.ಎಸ್.ಅವರು ಮಾತನಾಡುತ್ತಾ “ಈ ಮಹಾನ್ ಜನ ಸಾಗರವನ್ನು ನೋಡಿದ ಯಾರೇ ಆಗಲಿ ಉತ್ತರಪ್ರದೇಶ ಈಗ ಕಾಂಗ್ರೆಸ್(ಐ)ನ ಅಥವಾಬಿ.ಜೆ.ಪಿ.ಯ ಗುತ್ತಿಗೆಯಾಗಿ ಉಳಿದಿಲ್ಲವೆಂಬುದನ್ನು ಸುಲಭವಾಗಿ ಊಹಿಸಬಹುದು” ಎಂದು ಹೇಳಿ ಕ್ರಾಂತಿಕಾರೀ ಮೋರ್ಚಾದ ಸಂಘಟಕರನ್ನು ಅಭಿನಂದಿಸಿ ಇಂತಹಸಂಘಟನೆ ಸದ್ಯದ ಅವಶ್ಯಕತೆಯಾಗಿತ್ತು. ಇದು ಇಡೀ ದೇಶಕ್ಕೆ ಮಾರ್ಗವನ್ನು ತೋರಿಸುತ್ತದೆ ಎಂದು ಹೇಳಿದರು.

ಸಂಕ್ಷಿಪ್ತ ಸುದ್ದಿಗಳು

ಜೆಕೊಸ್ಲೋವಾಕಿಯಾದಲ್ಲಿ ಮೂರು ವಾರ್ಷಿಕೋತ್ಸವ

ಜೆಕೋಸ್ಲೊವಾಕಿಯಾದ ಜನತೆ ಎಂದಿನಂತೆ ಈ ವರ್ಷದ ಅಕ್ಟೋಬರ್ 28 ರಂದು ಕೂಡಾ ಮೂರು ವಾರ್ಷಿಕೋತ್ಸವಗಳನ್ನು ಉತ್ಸಾಹದಿಂದ ಆಚರಿಸಿದ್ದಾರೆ. ಇವು ವಿಭಿನ್ನ ಚಾರಿತ್ರಿಕ ಘಟ್ಟಗಳಲ್ಲಿನ ಮೂರು ಐತಿಹಾಸಿಕ ಘಟನೆಗಳ ಸ್ಮಾರಕವಾಗಿ ನಡೆಯುತ್ತವೆ. ಅಕ್ಟೋಬರ್ 28, 1918 ರಂದು ಸ್ವತಂತ್ರ ಜೆಕೋಸ್ಲೊವಾಕ್‌ಗಣತಂತ್ರದ ಸ್ಥಾಪನೆಯಾಯಿತು. ಅಕ್ಟೋಬರ್ 28, 1945 ರಾಷ್ಟ್ರೀಕರಣದ ಡಿಕ್ರಿ ಹೊರಡಿಸಿದ ದಿನ ಹಾಗೂ ಅಕ್ಟೋಬರ್ 28, 1918ರಲ್ಲಿ ಒಕ್ಕೂಟ ಸಂವಿಧಾನ ಶಾಸನಕ್ಕೆ ಸಹಿ ಬಿದ್ದ ದಿನ.

ತುದೆ ಪಾರ್ಟಿಗೆ 46 ವರ್ಷಗಳು

ಇರಾನ್ ತುದೆ ಪಾರ್ಟಿ ಇದೇ ಅಕ್ಟೋಬರ್ 2ರಂದು ತನ್ನ46ನೇ ವಾರ್ಷಿಕೋತ್ಸವ ಆಚರಿಸಿತು.ಈ 46ವರ್ಷಗಳಲ್ಲಿ ಅದುಬಹಿರಂಗ ದುಡಿಯಲು ಸಾಧ್ಯವಾದದ್ದು ಕೇವಲ 11 ವರ್ಷಗಳ ಕಾಲ ಮಾತ್ರ. ಹಿಂದೆ ಶಾಹನ ದಬ್ಬಾಳಿಕೆ, ದಮನ ಎದುರಿಸಿದ್ದ ಅದು ಈಗ ಖೋಮೇನಿಯ ಮೂಲಭೂತವಾದಿಗಳ ಕಾರ್ಯವನ್ನು ಎದುರಿಸಿ ಇರಾನೀ ಜನತಾ ಫೆಧಾಯೀ ಸಂಘಟನೆ (ಬಹುಸಂಖ್ಯಾತ)ಯ ಜತೆಗೆ ಇರಾನಿನ ಕ್ರಾಂತಿಕಾರೀ ಶಕ್ತಿಗಳ ಸಂಘಟನೆಯಲ್ಲಿ ತೊಡಗಿವೆ.

ಅಮೆರಿಕನ್ ಪರಮಾಣು ಶಸ್ತ್ರ ಸ್ಥಾವರಗಳಲ್ಲಿ ಅಪಾಯ

ಅಮೆರಿಕನ್ ಸರ್ಕಾರದ ಪರಮಾಣು ಶಸ್ತ್ರ ಸ್ಥಾವರಗಳಲ್ಲಿ ದೊಡ್ಡ ಪ್ರಾಣಾಪಾಯಕಾರೀ ಸಮಸ್ಯೆಗಳು ಕಂಡುಬಂದಿವೆಯೆಂದು ಅಲ್ಲಿನ ಸಂಸದೀಯ ಉಪಸಮಿತಿಯ ಮನವಿಪತ್ರವೊಂದು ಆಪಾದಿಸಿದೆ. ಒಂದು ಸ್ಥಾವರದ ಕಾರ್ಮಿಕರನ್ನು ಬೇಕೆಂದೇ ಗರಿಷ್ಟ ವಿಕಿರಣಕ್ಕೆ ಒಳ ಪಡಿಸಲಾಗುತ್ತಿದೆಯಂತೆ ಬೇರೆ ದೇಶಗಳ ಅಣುಸ್ಥಾವರಗಳು ಅಂತರ ರಾಷ್ಟ್ರೀಯ ಪರೀಕ್ಷಣೆಗೆ ಒಳಪಡಬೇಕೆಂದು ಒತ್ತಾಯಿಸುವ ಅಮೆರಿಕಾದಲ್ಲೇ ಇಂತಹ ಅಪಾಯಗಳಸಾಧ್ಯತೆ.ಅತ್ಯಂತ ತೀವ್ರವಾಗಿರವುದು ಎಂದು ಮನವಿಯಲ್ಲಿ ಸೇರಿಸಲಾಗಿದೆ. ಪೆಂಟಗಾನ್‌ನ ಶಸ್ತ್ರಾಸ್ತ್ರ ಅವಶ್ಯಕತೆಗಾಗಿ ಪರಮಾಣು ಉತ್ಪಾದನೆ ಬಗ್ಗೆ ಅಧ್ಯಕ್ಷ ರೇಗನ್‌ರ ಸತತ ಒತ್ತಡವೇ ಸುರಕ್ಷಣೆಯ ವ್ಯವಸ್ಥೆಯಲ್ಲಿ ಕುಂದುಂಟಾಗಲು ಕಾರಣ ಎಂದು ತಿಳಿಸಲಾಗಿದೆ.

ತಮಿಳುನಾಡು ಕೈಮಗ್ಗ ಕಾರ್ಮಿಕರ ಹೋರಾಟ–ಬಂಧನ

14ಅಂಶಗಳ ಬೇಡಿಕೆಯನ್ನು ಈಡೇರಿಸಬೇಕೆಂದು ಒತ್ತಾಯಿಸಿ ಅ.28ರಂದು ತಮಿಳು ನಾಡಿನಾದ್ಯಂತ ಸಾವಿರಾರು ಕೈ ಮಗ್ಗ ಕಾರ್ಮಿಕರು ಮುಷ್ಕರ ನಡೆಸಿದರು. ಸಿ.ಐ.ಟಿ.ಯು, ಎ.ಐ.ಟಿ.ಯು.ಸಿ. ಮತ್ತಿತರ ಸಂಘಟನೆಗಳು ಜಂಟಿಯಾಗಿ ಹೋರಾಟವನ್ನು ಆರಂಭಿಸಿವೆ. ಕೃಷಿಗೆ ನಂತರದ ಒಂದು ಪ್ರಮುಖ ಉದ್ಯಮವಾಗಿ ಕೈಮಗ್ಗ ಉದ್ಯಮ ಸ್ಥಾನ ಪಡೆದಿದೆ.

ನೂಲಿನ ಬೆಲೆ ವಿಪರೀತ ಹೆಚ್ಚಿರುವುದರಿಂದ ಮತ್ತು ಇನ್ನಿತರ ಸಮಸ್ಯೆಗಳಿಂದಾಗಿ ಕೈಮಗ್ಗ ಉದ್ಯಮವು ತೀರಾ ಬಿಕ್ಕಟ್ಟು ಎದುರಿಸುತ್ತಿದೆ. ಸುಮಾರು 30 ಲಕ್ಷ ಕಾರ್ಮಿಕರು ಈ ಉದ್ಯಮದಲ್ಲಿ ದುಡಿಯುತ್ತಿದ್ದಾರೆ. ಈಗಾಗಲೇ ಲಕ್ಷಾಂತರ ಕಾರ್ಮಿಕರು ಕೆಲಸ ಕಳೆದುಕೊಂಡಿದ್ದಾರೆ. ಈ ಬಗ್ಗೆ ಕೇಂದ್ರ ಸರ್ಕಾರವಾಗಲೀ ರಾಜ್ಯ ಸರ್ಕಾರವಾಗಲೀ ಯಾವುದೇ ಗಮನಹರಿಸುತ್ತಿಲ್ಲ. ಇದನ್ನು ಪ್ರತಿಭಟಿಸಿ ಅಕ್ಟೋಬರ್ 6ರಂದು ಕೈಮಗ್ಗ ಕಾರ್ಮಿಕರು ರಾಜ್ಯಾದ್ಯಂತ ಒಂದು ದಿನದ ಮುಷ್ಕರ ನಡೆಸಿದ್ದಾರೆ.

ಕೈಮಗ್ಗ ಕಾರ್ಮಿಕರ ಕಲ್ಯಾಣಕ್ಕಾಗಿ ಅಂಗೀಕರಿಸಿರುವ ಕಾಯಿದೆಯನ್ನು ಜಾರಿಗೊಳಿಸುವುದು, ನೂಲನ್ನು ನೇಕಾರರಿಗೆ ಮೀಸಲಿಡುವುದು, ಸಹಕಾರ ಸಂಘಗಳ ಚುನಾವಣೆ ನಡೆಸುವುದು, ಕನಿಷ್ಟ ಕೂಲಿ ಕಾಯಿದೆಯನ್ನು ಜಾರಿಗೆ ತರುವುದು, ನೇಕಾರರಿಗೆ ಸರ್ಕಾರದಿಂದ ಸಾಲ ಸೌಲಭ್ಯ,ನೇಕಾರರಿಗೆ ಗುರುತಿನ ಚೀಟಿ ನೀಡಿ ಅವರಿಗೆ ಅಗತ್ಯವಾದ ನೂಲನ್ನು ಸರ್ಕಾರವೇ ಒದಗಿಸುವುದು ಮುಂತಾದ 14 ಬೇಡಿಕೆಗಳನ್ನು ಮುಂದಿಟ್ಟು ಕೈಮಗ್ಗ ನೇಕಾರರು ಹೋರಾಟ ನಡೆಸುತ್ತಿದ್ದಾರೆ.

ಸಿ. ಐ. ಟಿ. ಯು. ಮುಖಂಡರ ಮೇಲೆ ಸುಳ್ಳು ಮೊಕದ್ದಮೆ – ರಾಜ್ಯಾದ್ಯಂತ ಪ್ರತಿಭಟನೆ

ತಮಿಳು ನಾಡಿನ ದಕ್ಷಿಣ ಅರ್ಕಾಟ್ ಜಿಲ್ಲೆಯಲ್ಲಿ ಪೋಲೀಸರ ಅರಾಜಕ ಆಕ್ರಮಣಗಳನ್ನು ಖಂಡಿಸಿ ತಮಿಳುನಾಡಿನಾದ್ಯಂತ ಅ. 26ರಂದು ಸಿ.ಐ.ಟಿ.ಯು. ಕಾರ್ಯಕರ್ತರು ಧರಣಿಮುಷ್ಕರ ನಡೆಸಿದರು. ದಕ್ಷಿಣ ಅರ್ಕಾಟ್ ಜಿಲ್ಲೆಯ ರಾಣಿಪೇಟೆ ಎಂಬಲ್ಲಿ ಅಪೊಲೋ ಟ್ಯೂಬ್ ಕಂಪೆನಿಯ ಮೇನೇಜರ್‌ನ ಕೊಲೆ ಸಂಬಂಧವಾಗಿ ಪೋಲೀಸು ಅಧಿಕಾರಿಗಳು ಸಿ.ಐ.ಟಿ.ಯು. ಮುಖಂಡರು ಮತ್ತು ಕಾರ್ಯಕರ್ತರನ್ನು ಬಂಧಿಸಿ ಅವರ ಮೇಲೆ ಸುಳ್ಳು ಮೊಕದ್ದಮೆಗಳನ್ನು ಹಾಕಿ ಅವರುಗಳನ್ನು ಚಿತ್ರಹಿಂಸೆಗೆ ಗುರಿ ಮಾಡಿದ್ದಾರೆ. ಇದನ್ನು ಖಂಡಿಸಿ ಸುಳ್ಳು ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳಬೇಕೆಂದೂ ಅವರನ್ನು ಕೂಡಲೇ ಬಿಡುಗಡೆ ಮಾಡಬೇಕೆಂದೂ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದೂ ರಾಜ್ಯ ಸರ್ಕಾರವನ್ನು ಒತ್ತಾಯಿಸಿ ಸಿ.ಐ.ಟಿ.ಯು. ರಾಜ್ಯ ಸಮಿತಿ ಈ ಕಾರ್ಯಕ್ರಮಕ್ಕೆ ಕರೆ ನೀಡಿತ್ತು.

ಕೊಯಮತ್ತೂರು ರಾಣಿಪೇಟೆ ತಿರುಪತ್ತೂರು, ನೈವೇಲಿ, ಸೇಲಂ, ಪಳನಿ, ವಿರುದುನಗರ್, ಕಾರೈಕುಡಿ, ಶಿವಗಂಗೆ, ಕೋವಿಲ್ ಪಟ್ಟಿ, ಊಟಿ ಮುಂತಾದೆಡೆಗಳಲ್ಲಿ ಸಾವಿರಾರು ಸಿ.ಐ.ಟಿ.ಯು. ಕಾರ್ಯಕರ್ತರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

REG No. BGW-148 MAG (2) PRB DECR 319/ 78-79

ಬೆಂಗಳೂರಿನ ಕಡೆಗೆ 4 ಜಾಥಾಗಳು

(1ನೇ ಪುಟದಿಂದ)

ಈ ಆಂದೋಲನದ ಅಂಗವಾಗಿ ಕರ್ನಾಟಕ ರಾಜ್ಯದಲ್ಲಿ ಬಿಜಾಪುರ, ಗುಲ್ಬರ್ಗಾ, ಮಂಗಳೂರು,ಮೈಸೂರು ಗಳಿಂದ ಜಾಥಾ ಹೊರಡಿಸಬೇಕೆಂದೂ, ಅವುಗಳೆಲ್ಲ ನವೆಂಬರ್ 19 ರಂದು ರಾತ್ರಿ ಬೆಂಗಳೂರು ಸೇರಬೇಕೆಂದೂ, ಹೊಸೂರಿನ ಮೂಲಕ ನಮ್ಮ ರಾಜ್ಯ ವನ್ನು ಪ್ರವೇಶಿಸುವ ತಿರುವನಂತಪುರ ದಿಂದ ಹೊರಟು ಬರುವ ಜಾಥಾವನ್ನು 20ರಂದು ಸ್ವಾಗತಿಸಬೇಕೆಂದೂ ನಿರ್ಣಯಿಸಲಾಯಿತು. ಈ ಜಾಥಾ 20 ರಂದು ಬೆಂಗಳೂರಿನಲ್ಲಿದ್ದು 21 ರಂದು ಮುಂಜಾನೆ ಕೋಲಾರ, ಚಿಂತಾಮಣಿ ಶಿಡ್ಲಘಟ್ಟ, ಚಿಕ್ಕಬಳ್ಳಾಪುರಮಾರ್ಗವಾಗಿ ಬಾಗೇಪಲ್ಲಿಯಲ್ಲಿ ರಾತ್ರಿ ವಾಸ್ತವ್ಯಮಾಡುವುದು ಮಾರು ದಿವಸ ಹಿಂದೂಪುರದ ಮೂಲಕ ಆಂಧ್ರ ರಾಜ್ಯವನ್ನು ಪ್ರವೇಶಿಸುವುದು.

ನಮ್ಮ ರಾಜ್ಯದ ಜಾಥಾಗಳ ವಿವರಣೆ

ಮಂಗಳೂರುಜಾಥಾ

ನವಂಬರ್ 16 ರಂದು ಮಂಗಳೂರಿನಿಂದ ಹೊರಟು ಉಡುಪಿ ಮಾರ್ಗವಾಗಿ ಕುಂದಾಪುರ ನ.17 ರಂದು ತೀರ್ಥಹಳ್ಳಿ ಶಿವಮೊಗ್ಗ, ಭದ್ರಾವತಿ,
18 ರಂದು ತರೀಕೆರೆ,ಚಿಕ್ಕಮಗಳೂರು ಬೇಲೂರು ಹಾಸನ,
19 ರಂದು ಅರಸಿಕೆರೆ, ತಿಪಟೂರು, ತುಮಕೂರು,ಬೆಂಗಳೂರು.,

ಮೈಸೂರು ಜಾಥಾ

17 ರಂದು ನಂಜನಗೂಡು,ಮೈಸೂರು
18 ರಂದು ಶ್ರೀರಂಗಪಟ್ಟಣ, ಮಂಡ್ಯ
19 ರಂದು ಮದ್ದೂರು, ಚನ್ನಪಟ್ಟಣ ರಾಮನಗರ, ಕೆಂಗೇರಿ, ಬೆಂಗಳೂರು.

ಬಿಜಾಪುರ ಜಾಥಾ

15 ರಂದು ಸಿಂದಗಿ, ಇಂಡಿ, ಬಿಜಾಪುರ ಬಬಲೇಶ್ವರ ಜಮಖಂಡಿ, ಬನಹಟ್ಟಿ,
16 ರಂದು ಮಹಾಲಿಂಗಪುರ, ಗೋಕಾಕ್ ಬೆಳಗಾವಿ,
17 ರಂದು ಬೈಲಹೊಂಗಲ, ರಾಮದುರ್ಗ,ಸೌದತ್ತಿ,ನರಗುಂದ,ಹುಬ್ಬಳ್ಳಿ.
18 ರಂದು ಶಿಗ್ಗಾವಿ, ಹಾವೇರಿ, ರಾಣೆಬೆನ್ನೂರ, ಹರಿಹರ, ದಾವಣಗೆರೆ.
19 ರಂದು ಬರಮಸಾಗರ, ಚಿತ್ರದುರ್ಗ ಹಿರಿಯೂರ, ಶಿರಾ, ತುಮಕೂರು, ಯಶವಂತಪುರ, ಬೆಂಗಳೂರು.

ಗುಲ್ಬರ್ಗಾ ಜಾಥಾ

14 ರಂದು ಗುಲ್ಬರ್ಗಾ, ಚಿತಾಪುರ ವಾಡಿ, ಶಹಾಬಾದ,ಜೇವರ್ಗಿ
15 ರಂದು ಶಹಾಪುರ, ದೇವದುರ್ಗ, ಕಬ್ಬೂರ, ರಾಯಚೂರು
16 ರಂದು ಮಾನ್ವಿ, ಸಿಂಧನೂರು, ಗಂಗಾವತಿ, ಹೊಸಪೇಟೆ
17 ರಂದು ಹಗರಿಬೊಮ್ಮನ ಹಳ್ಳಿ, ಹರಪ್ಪನಹಳ್ಳಿ,ಕೊಡಲಾಗಿ,ಸೊಂಡೂರ ತೋರಣಗಲ್, ಬಳ್ಳಾರಿ.
18 ರಂದು ರಾಮಪುರ, ಮೊಣಕಾಲ್ಮೂರ್, ಚಳ್ಳಕೆರೆ, ಹಿರಿಯೂರ್
19 ರಂದು ಶಿರಾ, ತುಮಕೂರು, ಬೆಂಗಳೂರು.

ಗುಲ್ಬರ್ಗಾ ಮತ್ತು ಬಿಜಾಪುರ ಜಾಥಾಗಳು ತಾ.18 ರಂದು ಸಂಜೆ ಹಿರಿಯೂರಲ್ಲಿ ಒಟ್ಟು ಸೇರಬೇಕು. ಅಲ್ಲಿಂದ ಬೆಂಗಳೂರಿಗೆ ಒಟ್ಟಿಗೇ ಬರಬೇಕು. ಮಂಗಳೂರು ಜಾಥಾ ತುಮಕೂರಿನಲ್ಲಿ ಈ ಜಾಥಾಗಳನ್ನು ಸೇರಬೇಕು. ಈ ನಾಲ್ಕು ಜಾಥಾಗಳು ಹಾದುಹೋಗುವ ದಾರಿ ಉದ್ದಕ್ಕೂ ಸಾಮೂಹಿಕ ಸಂಘಟನೆಗಳು ಜನ ಸಂಗ್ರಹಿಸಿ, ಬ್ಯಾಂಡು, ವಾದ್ಯಗಳೊಂದಿಗೆ ಭವ್ಯ ಸ್ವಾಗತ ನೀಡುವ ಹಾಗೆಯೇ ಫಲಹಾರ ಮತ್ತುಊಟದ ವ್ಯವಸ್ಥೆ ಮಾಡಬೇಕು.

ಪ್ರತಿಯೊಂದು ಜಾಥಾದಲ್ಲಿಯೂ 22 ರಿಂದ25 ರಷ್ಟು ಸಾಮೂಹಿಕ ಸಂಘಟನೆಗಳ ಪ್ರತಿನಿಧಿಗಳಿರುತ್ತಾರೆ.

ಈ ಜಾಥಾ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಿ ಕರ್ನಾಟಕದಲ್ಲಿ ಸಾಮೂಹಿಕ ಸಂಘಟನೆಗಳು ಶಕ್ತಿಯುತವಾಗುವಂತೆ,ಎಡಮತ್ತು ಜಾತ್ಯಾತೀತ ಶಕ್ತಿಗಳು ಬೆಳೆಯುವಂತೆ, ಬಲಪಂಥೀಯ, ಮತೀಯ, ಛಿದ್ರಕಾರಿ ಶಕ್ತಿಗಳ ಬಲ ಕುಂದುವಂತೆ ಮಾಡುವುದು ಅಗತ್ಯ. ಈ ದೃಷ್ಟಿಯಲ್ಲಿ ಎಲ್ಲಾ ಸಾಮೂಹಿಕ ಸಂಘಟನೆಗಳು, ಎಡಪಕ್ಷಗಳೂ ಕೆಲಸ ಮಾಡಬೇಕಾಗಿ ವಿನಂತಿ. ○

'ಐಕ್ಯರಂಗ' ಓದುಗರ ಪ್ರಶ್ನೆಗಳಿಗೆ

ಕಾಂ. ಇ ಎಂ ಎಸ್.ರವರಿಂದ ಉತ್ತರ

ಪಕ್ಷದ ಕೇರಳ ಸಮಿತಿಯ ಮುಖವಾಣಿ "ಚಿಂತಾ"ದಲ್ಲಿ ಕಾ.ಇ.ಎಂ. ಎಸ್.ರವರ ಪ್ರಶ್ನೋತ್ತರವನ್ನು ಈಗಾಗಲೇ ಐಕ್ಯರಂಗದಲ್ಲಿ ಪ್ರಕಟಿಸುತ್ತಿದ್ದೇವೆ. ಈಗ ಕಾಂ.ಇ.ಎಂ.ಎಸ್.ರವರು "ಐಕ್ಯರಂಗ"ದ ಓದುಗರು ಕೇಳುವ ಪ್ರಶ್ನೆಗಳಿಗೂ ಉತ್ತರ ನೀಡಲು ಒಪ್ಪಿದ್ದಾರೆ. ಐಕ್ಯರಂಗದ ಓದುಗರೆಲ್ಲರೂ ಪ್ರಸ್ತುತ ರಾಷ್ಟ್ರೀಯ-ಅಂತರರಾಷ್ಟ್ರೀಯ ಪರಿಸ್ಥಿತಿಗೆ ಸಂಬಂಧಿಸಿ ಪ್ರಶ್ನೆಗಳನ್ನು ಕೇಳಬಹುದು. ನಮಗೆ ಬರುವಪ್ರಶ್ನೆಗಳೆಲ್ಲವನ್ನು ಇಂಗ್ಲೀಷಿಗೆಅನುವಾದಿಸಿ ಈ ಪ್ರಶ್ನೆಗಳಲ್ಲಿ ಆಯ್ಕೆಮಾಡಿಕೊಂಡು ಕಳುಹಿಸಿಕೊಡಲಾಗುವುದು. ಕಾಂ.ಇ.ಎಂ.ಎಸ್.ರವರು ನೀಡುವ ಉತ್ತರವನ್ನು ಅನುವಾದಿಸಿ ಪ್ರಕಟಿಸಲಾಗುವುದು. ರಾಜಕೀಯ, ಸಾಂಸ್ಕೃತಿಕ, ಸೈದ್ಧಾಂತಿಕ ರಂಗಗಳ ಬಗ್ಗೆ ತಮ್ಮ ಸಂದೇಹಗಳಿಗೆ ಪರಿಹಾರ ಪಡೆಯುವ ಈ ಸುವರ್ಣಾವಕಾಶವನ್ನು "ಐಕ್ಯರಂಗ"ದ ಓದುಗರೆಲ್ಲರೂ ಬಳಸಿಕೊಳ್ಳಬೇಕೆಂದು ವಿನಂತಿಸಿಕೊಳ್ಳುತ್ತೇವೆ.

ವ್ಯವಸ್ಥಾಪಕರು

ಮಜ್ದೂರ್ - ಕಿಸಾನ್ ಕರ್ನಾಟಕ ರಾಜ್ಯ ಸಮಿತಿ

ಎಸ್. ಸೂರ್ಯನಾರಾಯಣರಾವ್, ಸಿ. ನಂಜುಂಡಪ್ಪ [ಸಿ.ಐ.ಟಿ.ಯು.], ರಾಮಚಂದ್ರರಾವ್, ಎಂ. ಎಸ್. ಉಗ್ರಪ್ಪ (ಪ್ರಾಂತ ರೈತ ಸಂಘ), ಪಿ. ಜಗನ್ನಾಥ, ರಾಮರೆಡ್ಡಿ (ಕೃಷಿ ಕಾರ್ಮಿಕರ ಸಂಘ) ಆರ್. ಜಯಕುಮಾರ್, ಎಸ್. ಆರ್. ಆರಾಧ್ಯ [ಎಸ್. ಎಫ್. ಐ.] ನಾಗಮೋಹನದಾಸ್,ಶಿವರಾಂ(ಡಿವೈಎಫ್ಐ),ಹರಿಣಿಕಕ್ಕೇರಿ(ಮಹಿಳಾ ಸಂಘಟನೆ), ಹಾಗೆಯೇ ಎ.ಐ.ಟಿ.ಯು ಸಿ., ರಾಜ್ಯ ರೈತ ಸಂಘ, ಎಐಎಸ್ಎಫ್, ಎಐವೈಎಫ್‌ಗಳ ಪ್ರತಿನಿಧಿಗಳು ಒಳಗೊಂಡಿದ್ದಾರೆ. ಎಸ್. ಸೂರ್ಯನಾರಾಯಣರಾವ್, ಸಿ. ನಂಜುಂಡಪ್ಪ, ವಿ. ಜೆ. ಕೆ. ನಾಯರ್, ಪಿ. ರಾಮಚಂದ್ರರಾವ್, ಎಂ. ಎಸ್. ಕೃಷ್ಣನ್, ಬಾಬು ಮ್ಯಾಥ್ಯೂ, ಎಂ. ಸಿ. ವೆಂಕಟ್ರಾಮಯ್ಯ, ಎಚ್. ವಿ. ಅನಂತಸುಬ್ಬರಾವ್ ಅವರನ್ನೊಳಗೊಂಡ ಕಾರ್ಯದರ್ಶಿ ಮಂಡಳಿಯನ್ನು ರಚಿಸಲಾಯಿತು.

ಪ್ರಭಾವಕ್ಕೊಳಗಾಗದ ಸರ್ಕಾರ ಬೇಕು

[1ನೇ ಪುಟದಿಂದ]

ಗರ್ಭಪಾತ ಮಾಡುವ ಖಾಸಗೀ ಆಸ್ಪತ್ರೆಗಳು ತೀವ್ರ ಚಟುವಟಿಕೆಯಿಂದಿರುವುದನ್ನು ನೋಡಿದರೆ 21 ನೇ ಶತಮಾನಕ್ಕೆ ನೆಗೆಯುವ ರಾಜೀವಗಾಂಧಿಯವರ ಕಾರ್ಯಕ್ರಮದ ಬಗ್ಗೆ ಸಂಶಯಮೂಡುತ್ತದೆ. ನಾಗರೀಕ ಸಮಾಜ ತಲೆತಗ್ಗಿಸ ಬೇಕಾದ ವಿಷಯುವಿದಾಗಿದೆಯೆಂದರು.

ದಾರಿ ತಪ್ಪಿ ಹೋಗುತ್ತಿರುವ ಯುವ ಶಕ್ತಿಯನ್ನು ಡಿ.ವೈ.ಎಫ್.ಐ. ಸರಿಯಾದ ದಾರಿಗೊಯ್ಯುವ ಜವಾಬ್ದಾರಿಯನ್ನು ನಮ್ಮ ರಾಜ್ಯದಲ್ಲಿ ಕೈಗೊಳ್ಳಲು ಇನ್ನೂ ಹೆಚ್ಚಿನ ಶ್ರಮವಹಿಸಬೇಕೆಂದು ಕರೆ ಕೊಟ್ಟರು.

ಡಿ.ವೈ.ಎಫ್.ಐ. ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಹಾಗೂ ಲೋಕಸಭಾ ಸದಸ್ಯರಾದ ಕಾ|ಹನನ್ ಮುಲ್ಲಾ ಮತ್ತು ಸಹ ಕಾರ್ಯದರ್ಶಿ ಕಾ||ಎಂ.ಎ.ಬೇಬಿಯವರನೇತೃತ್ವದಲ್ಲಿ ವಿಚ್ಛಿದ್ರಕಾರಿ ಹಾಗೂ ಸರ್ವಾಧಿಕಾರಿ ಶಕ್ತಿಗಳ ವಿರುದ್ಧ ಸೆಣಸಾಡಿದ ಹುತಾತ್ಮರಿಗೆ ಕೆಂಪು ವಂದನೆಗಳನ್ನು ಸಲ್ಲಿಸಲಾಯಿತು.

ಡಿ.ವೈ.ಎಫ್.ಐ. ರಾಜ್ಯ ಕಾರ್ಯದರ್ಶಿ ಕಾ.ಶಿವರಾಂ ಬರೆದ "ಶಾಂತಿ ಸಂದೇಶದ ನಾಡಿನಲ್ಲಿ" ಎನ್ನುವ ಕಿರು ಹೊತ್ತಿಗೆಯನ್ನು ಸಿ.ಪಿ.ಐ.(ಎಂ) ರಾಜ್ಯ ಕಾರ್ಯದರ್ಶಿ ಕಾ.ಪಿ.ರಾಮಚಂದ್ರರಾವ್ ಬಿಡುಗಡೆ ಮಾಡಿದರು. ವೈಜ್ಞಾನಿಕ ಮನೋ ದೃಷ್ಟಿಯನ್ನು ಬೆಳೆಸಿಕೊಳ್ಳಲು ಮತ್ತುನಿರುದ್ಯೋಗದ ವಿರುದ್ಧ ಹೋರಾಡಲು ಅವರು ಕರೆ ನೀಡಿದರು.

ಸಿ.ಪಿ.ಐ (ಎಂ)ನ ವಿಧಾನಸಭಾ ಸದಸ್ಯರುಗಳಾದ ಕಾ. ಟಿ.ಎಸ್.ಮಣಿ, ಮತ್ತು ಆರ್.ವೆಂಕಟರಾಮಯ್ಯನವರುಸಮ್ಮೇಳನಕ್ಕೆ ಶುಭಕೋರಿಮಾತನಾಡಿದರು. ಎ.ಐ.ವೈ.ಎಫ್. ರಾಜ್ಯ ಕಾರ್ಯದರ್ಶಿ ಶುಭ ಕೋರಿದರು. ಸ್ವಾಗತ ಸಮಿತಿ ಕಾರ್ಯದರ್ಶಿ ಕಾ.ಜಿ. ವಿ.ಶ್ರೀರಾಮರೆಡ್ಡಿಯವರು ವಂದನಾರ್ಪಣೆ ಮಾಡಿದರು.

ಅಕ್ಟೋಬರ್ ಕ್ರಾಂತಿ

[ಒಂದನೇ ಪುಟದಿಂದ]

ತನ್ನ ಪಾಶವೀ ಹಿಡಿತದಿಂದಬಿಡಿಸಿಕೊಂಡ ವಸಾಹತು ದೇಶಗಳ ಮಾನವ ಸಮಾಜವನ್ನು, ಕೈಗೆ ಸಿಕ್ಕಿ ತಪ್ಪಿಸಿಕೊಂಡ ಬೇಟೆಯನ್ನು ಮತ್ತೆ ಹಿಡಿಯಲು ಕ್ರೋಧದಿಂದ ಹೊಂಚು ಹಾಕುತ್ತಿರುವ ಹಿಂಸ್ರ ಪಶುವಿನ ಕೋರೆದಾಡೆಗಳಿಗೆ ಸಿಗದಂತೆ ಮಾನವ ಕುಲಕ್ಕೆರಕ್ಷೆಯಾದ ಶಕ್ತಿ ಅದು.

ಕತ್ತಲೆಯಲ್ಲಿ ಹುಟ್ಟಿ ಕತ್ತಲಲ್ಲೇ ಬದುಕಿ ನರಳುತ್ತಿರುವ ಜನಕೋಟಿಗೆ ಬೆಳಕು ನೀಡಲು 70 ವರ್ಷಗಳಿಂದ ನಿರಂತರವಾಗಿ ಉರಿಯುತ್ತಿರುವ ಆಶಾದೀಪಿಗೆ ಅದು. ಅಂದು ಹೊತ್ತಿದ ಈ ಹಣತೆ ಜಗತ್ತಿನ ಮೂಲೆ ಮೂಲೆಗಳಲ್ಲಿಯೂ ಬೆಳಕು ಹೊತ್ತಿಸಿದೆ. ಜಗತ್ತಿನ ಮೂರನೇ ಒಂದು ಭಾಗದ ಜನ ಈ ಬೆಳಕಿನಲ್ಲಿ ಸೊಂಪಾಗಿ ಬದುಕುತ್ತಿದ್ದಾರೆ. ಜಗತ್ತಿನೆಲ್ಲಾ ದುಡಿಯುವ ಜನ ಆ ಕಡೆಗೆ ನೆಟ್ಟ ಕಣ್ಣಾಗಿದ್ದಾರೆ.

ಮಾನವಕುಲ ಹಿಂದೆಂದೂ ಕೈಗೊಂಡಿರದ ಅದ್ಭುತವನ್ನು ಸಾಧಿಸಿದ, ಬೆಳೆಸಿದ, ಈ ಮಹಾನ್ ರಷ್ಯನ್ ಕಾರ್ಮಿಕ ವರ್ಗಕ್ಕೆ ಸೋವಿಯತ್ ಜನತೆಗೆ ಕ್ರಾಂತಿಕಾರಿ ವಂದನೆಗಳನ್ನು ಸಲ್ಲಿಸೋಣ.ಭಾರತದಲ್ಲಿ, ಜಗತ್ತಿನೆಲ್ಲೆಡೆಯಲ್ಲಿ ಕ್ರಾಂತಿ ಸಾಧಿಸಲು ದುಡಿಯೋಣ.

ಈ ವಾರ....

ಆದರೆ ಘೀಸಿಂಗ್‌ರ ಗೂರ್ಖಾ ನಿಯೋಗದವರನ್ನು ಬೂಟಾಸಿಂಗ್ ಬರ ಮಾಡಿಕೊಳ್ಳುವ ಅವರ ನಿಜ ಉದ್ದೇಶವೇನು? ಡಾರ್ಜಿಲಿಂಗ್ ಗಿರಿ ಪ್ರದೇಶದ ಅಭಿವೃದ್ಧಿ ಮಂಡಳಿ ಸ್ಥಾಪಿಸುವ ನಿರ್ಧಾರ ತೆಗೆದುಕೊಂಡ ತ್ರಿಪಕ್ಷ ಸಭೆಯಲ್ಲಿ ಮುಂದಿನ ತ್ರಿಪಕ್ಷ ಸಭೆ ಕಲ್ಕತ್ತೆಯಲ್ಲಿ ನಡೆಯಲಿದೆಯೆಂದು ಬೂಟಾಸಿಂಗ್ ಹೇಳಿದ್ದರು. ಆದರೆ ಪಶ್ಚಿಮ ಬಂಗಾಳ ಸರಕಾರವನ್ನು ಬಿಟ್ಟು ಇದೀಗ ದೆಹಲಿಯಲ್ಲಿ ಗೂರ್ಖಾ ನಾಯಕರನ್ನು ಭೇಟಿ ಮಾಡುತ್ತಿದ್ದಾರೆ. ಇದು ಗೂರ್ಖಾ ಚಳುವಳಿಯನ್ನು ಪರೋಕ್ಷವಾಗಿ ಬೆಂಬಲಿಸುವ ಮೂಲಕ ಈ ಚಳುವಳಿಯನ್ನು ನಿರಂತರವಾಗಿಸಿ ಪ.ಬಂಗಾಳ ಎಡರಂಗಸರ್ಕಾರಕ್ಕೆ ಮುಜುಗರವನ್ನುಂಟು ಮಾಡುವುದು ಕೇಂದ್ರದ ಉದ್ದೇಶವಿದ್ದಂತಿದೆ.

—'ಪ್ರಜಾವಾಣಿ' ಸಂಪಾದಕೀಯ

ರಾಜೀವ್‌ಗಾಂಧಿಯವರು "ಜಾರ್ಜ್‌ಬುಷ್‌ರವರು ಭಾರತದಲ್ಲಿ ಸಿ.ಐ.ಎ. ಕೈವಾಡಇಲ್ಲಎಂದಿದ್ದಾರೆ. ಅವರ ಮಾತುಗಳನ್ನು ನಾನು ಸ್ವೀಕರಿಸುತ್ತೇನೆ" ಎಂದಿದ್ದಾರೆ. ಬುಷ್ ಅವರ ಈ ಹೇಳಿಕೆಯನ್ನು ಒಪ್ಪಿಕೊಂಡರೆ ಆಡಳಿತದ ಈವರೆಗಿನ ನಿಲುವು ಏನಾಗುತ್ತದೆ.

—ಸಿ.ವಿ.ರಾಜಗೋಪಾಲ್
'ಉದಯವಾಣಿ' ಯಲ್ಲಿ

ಇತ್ತೀಚೆಗಷ್ಟೇ ಕಾಂಗ್ರೆಸ್ ಆಡಳಿತವಿರುವ ಮಧ್ಯಪ್ರದೇಶದ ಬಿಲಾಸಪುರದಲ್ಲಿ ದೇವಾಲಯ ಪ್ರವೇಶಿಸಲು ಯತ್ನಿಸಿದ ಹಂಜನರ ಮೇಲೆ ಪೋಲೀಸರು ಗುಂಡು ಹಾರಿಸಿ ನಾಲ್ವರನ್ನು ಬಲಿ ತೆಗೆದುಕೊಂಡಿದ್ದಾರೆ.

-'ಪ್ರಜಾವಾಣಿ' ವರದಿ

Printed & Published by P. Ramachandra Rao on behalf of the Communist Party of India [Marxist] Karnataka State Committee
K. V. Temple Street, Sultanpet, Bangalore-560053 Editorial and Managerial Office : L-56, K. V. Temple Street,
Sultanpet B-53 Phone : 75331
Editor Ramachandra Rao
Managing Editor : N. K. Upadhyaya